EdelGive Foundation
An Edelweiss Initiative

ಸಂಪಾದಕರು : **ಗಣಪತಿ ಭಟ್ಟ**

MANUVIKASA

# ಮನುವಿಕಾಸ

ವಾರ್ತಾಪತ್ರ

ಸಂಪುಟ - 6 ಸಂಚಿಕೆ - 1 ಖಾಸಗಿ ಪ್ರಸಾರಕ್ಕಾಗಿ ಮಾತ್ರ

**ಸಂಪಾದಕೀಯ ಮಂಡಳಿ :** ಶ್ರೀಮತಿ ಶುಭಾ ಪೈ । ಗಣಪತಿ ಹೆಗಡೆ । ಶ್ರೀಕಾಂತ ಹೆಗಡೆ । ಕುಮಾರಿ ಶಿಲ್ಪಾ ಶಾಸ್ತ್ರಿ



MANUVIKASA
20ನೇ ವರ್ಷದ ಸಂಭ್ರಮ



## ಸಂಪಾದಕರ ಲೇಖನಿಯಿಂದ.....

ಆತ್ಮೀಯ ಓದುಗರೇ,

ಈ ಬಾರಿಯ ವಾರ್ತಾಪತ್ರಿಕೆಯನ್ನು ತಮ್ಮ ಮುಂದೆ ತೆರೆದಿಡಲು ಅತೀವ ಸಂತಸ ಮತ್ತು ಹೆಮ್ಮೆ ಎಂದೆನಿಸುತ್ತಿದೆ, ಏಕೆಂದರೆ ಮನುವಿಕಾಸ ಸಂಸ್ಥೆಯು ಆರಂಭವಾಗಿ ಎರಡು ದಶಕಗಳು ಪೂರ್ಣಗೊಂಡು 21ನೇ ವಸಂತಕ್ಕೆ ಕಾಲಿರಿಸುತ್ತಿದೆ.

ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಕರ್ಜಗಿ ಗ್ರಾಮ ನನ್ನ ಹುಟ್ಟೂರು. ನನ್ನ ಬಾಲ್ಯದ ದಿನಗಳಲ್ಲಿ ನಮ್ಮೂರಿನಲ್ಲಿ ರಸ್ತೆ, ಸಾರಿಗೆ–ಸಂಪರ್ಕ, ಶಿಕ್ಷಣ ಕೇಂದ್ರವಾಗಲಿ, ಗ್ರಂಥಾಲಯವಾಗಲಿ ಯಾವುದೇ ಮೂಲಭೂತ ಸೌಕರ್ಯಗಳಿರಲಿಲ್ಲ. ನಮ್ಮ ಊರನ್ನು ನಾವು ಮೊದಲು ಅಭಿವೃದ್ಧಿಪಡಿಸಬೇಕು ಎಂಬ ಹಂಬಲದಿಂದ ಸಮಾನ ಮನಸ್ಕರ ಗುಂಪಿನಿಂದ ರೂಪಿತಗೊಂಡಿದ್ದೇ **"ಮನುವಿಕಾಸ"**.

ಬಡತನದ ಕಷ್ಟದಿಂದ ಬಂದ ನನಗೆ ಶಿಕ್ಷಣವನ್ನು ಪೂರೈಸುವ ಹೊತ್ತಿಗೆ ಸಮಾಜದ ಆಗು ಹೋಗುಗಳನ್ನ ಅರಿತಿದ್ದೆ. ಅದೆಷ್ಟೋ ವಿದ್ಯಾರ್ಥಿಗಳು ಬಡತನದ ಬೇಗೆಯಿಂದ ಶಿಕ್ಷಣದಿಂದ ವಿಮುಖವಾಗುತ್ತಿರುವುದನ್ನು ನೋಡಿದ್ದೆ. ಮಲೆನಾಡಿನ ಭಾಗಗಳಲ್ಲಿ ಆಗುತ್ತಿರುವ ನೀರಿನ ಸಮಸ್ಯೆ ಕಣ್ಣಾರೆ ಕಂಡಿದ್ದೆ, ಈ ಬಗೆಯ ಸಮಸ್ಯೆಗಳನ್ನು ಮನಗಂಡಿದ್ದ ನಾನು ಅಬ್ದುಲ್ ಕಲಾಂರವರ **"You have to dream before, Your dreams can come True"** ಎಂಬ ಮಾತಿನಂತೆ ಸಂಸ್ಥೆಯೊಂದನ್ನು ಕಟ್ಟಿ ಇವೆಲ್ಲದಕ್ಕೂ ಪರಿಹಾರ ಕಂಡುಕೊಳ್ಳಬೇಕು ಎಂಬ ಕನಸನ್ನು ಕಟ್ಟಿಕೊಂಡಿದ್ದೆ. ಇದೀಗ ಆ ಕನಸು ಸಾಕಾರಗೊಂಡು 20 ವರ್ಷ ಕಳೆದಿದೆ. ಜಲ ಸಂರಕ್ಷಣೆ, ಶಿಕ್ಷಣ, ಮಹಿಳಾ ಸಬಲೀಕರಣ, ಆರೋಗ್ಯ, ಪರಿಸರ ಈ ಮೊದಲಾದ ಉದ್ದೇಶದೊಂದಿಗೆ ಸಂಸ್ಥೆಯನ್ನು ಆರಂಭಿಸಿ ಇಂದು ಉತ್ತರಕನ್ನಡ, ಹಾವೇರಿ, ಶಿವಮೊಗ್ಗ, ಧಾರವಾಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವಿವಿಧ ಯೋಜನೆಗಳನ್ನು ರೂಪಿಸಿ ಕಾರ್ಯ ನಿರ್ವಹಿಸುತ್ತಿದೆ.

ರೈತರ ಸಹಭಾಗಿತ್ವದೊಂದಿಗೆ 225 ಕೆರೆಗಳನ್ನು ಹೂಳೆತ್ತಿ ಅಭಿವೃದ್ಧಿಪಡಿಸಲಾಗಿದೆ, 3813 ಕ್ಕೂ ಅಧಿಕ ಕೃಷಿ ಹೊಂಡಗಳನ್ನು ರೈತರಿಗೆ ನಿರ್ಮಿಸಿಕೊಟ್ಟು ರೈತಾಪಿ ವರ್ಗದವರಿಗೆ ಅನುಕೂಲ ಮಾಡಿಕೊಡಲು ಶ್ರಮಿಸಿದ್ದೇವೆ. 40,000 ಕ್ಕೂ ಅಧಿಕ ಮಹಿಳೆಯರನ್ನು ಒಗ್ಗೂಡಿಸಿ ಸ್ವ ಸಹಾಯ ಸಂಘಗಳನ್ನು ರಚಿಸಿದ್ದೇವೆ. ಮಹಿಳೆಯರು ಸ್ವ ಉದ್ಯೋಗಿಗಳಾಗಲು ಹೊಲಿಗೆ ತರಬೇತಿ, ಬ್ಯೂಟಿಶೀಯನ್ ತರಬೇತಿ, ಕೇಟರಿಂಗ್ ತರಬೇತಿಯಂತಹ ವಿವಿಧ ತರಬೇತಿಗಳನ್ನು ಸಂಸ್ಥೆಯ ಮೂಲಕ ನೀಡುತ್ತಾ ಬಂದಿದ್ದೇವೆ.

ಬದಲಾಗುತ್ತಿರುವ ಹವಾಮಾನದ ಕುರಿತು ಅಧ್ಯಯನ ಮಾಡಲು ಅರಣ್ಯ ಪ್ರದೇಶಗಳ ಬಗ್ಗೆ ತಿಳಿಯಲು ಜರ್ಮನಿಯ ಹನ್ಸ ಸೀಡಲ್ ಫೌಂಡೇಶನ್ ಸಹಕಾರದೊಂದಿಗೆ ಸಿದ್ದಾಪುರ ತಾಲೂಕಿನ ಕರ್ಜಗಿ ಗ್ರಾಮದಲ್ಲಿ **"ಕಲಿಕಾ ಕೇಂದ್ರವನ್ನು"** ಸ್ಥಾಪಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳಿಗೆ ಅಧ್ಯಯನ ಮಾಡಲು ಮುಕ್ತ ಅವಕಾಶವನ್ನು ಕಲ್ಪಿಸಲಾಗಿದೆ.

ಮನುವಿಕಾಸ ಸಂಸ್ಥೆಯು ಹೆಚ್.ಡಿ.ಎಫ್.ಸಿ ಪರಿವರ್ತನ ಇವರ ಸಹಯೋಗದೊಂದಿಗೆ ಕುಂದಾಪುರ ತಾಲೂಕಿನ ಮೀನುಗಾರ ಮಹಿಳೆಯರಿಗೆ ಮತ್ತು ಯಲ್ಲಾಪುರ ತಾಲೂಕಿನ ಸಿದ್ದಿ ಬುಡಕಟ್ಟು ಸಮುದಾಯದ ಅಭಿವೃದ್ಧಿಗಾಗಿ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ.

ನಬಾರ್ಡ್ ಸಂಸ್ಥೆಯ ಸಹಕಾರದೊಂದಿಗೆ ಬಾಳೆಗದ್ದೆಯಲ್ಲಿ ಪ್ರಗತಿಮಿತ್ರ ನಾರ್ಥ್ ಕೆನರಾ ಫಾರ್ಮರ್ಸ್ ಪ್ರೊಡ್ಯುಸರ್ ಕಂಪನಿ ಲಿಮಿಟೆಡ್ ಆರಂಭಿಸಿ ಅಡಿಕೆ ಸಂಸ್ಕರಣೆಯನ್ನು ಮಾಡಲಾಗುತ್ತಿದ್ದು, ಕಂಪನಿಯು ಮಲೆನಾಡಿನ ಅಡಿಕೆ ಬೆಳೆಗಾರರಿಗೆ ನೆರವಾಗಿದೆ. ಕರಾವಳಿ ಭಾಗದ ಬಡಮೀನುಗಾರ ಮಹಿಳೆಯರಿಗೆ ಅನುಕೂಲವಾಗಲೆಂದು ಕಾರವಾರ ಮತ್ತು ಕಾಸರಕೋಡಿನಲ್ಲಿ ರೈತ ಉತ್ಪಾದಕ ಸಂಸ್ಥೆಯನ್ನು ಪ್ರಾರಂಭಿಸಿದೆ.

ಗೋಕರ್ಣದ ತರಕಾರಿ ಬೆಳೆಗಾರರಿಗೆ ಉತ್ತಮ ಮಾರುಕಟ್ಟೆ ಸೌಲಭ್ಯ ಒದಗಿಸಿ ಪ್ರೋತ್ಸಾಹಿಸಲು ಗೋಕರ್ಣ ತರಕಾರಿ ಬೆಳಗಾರರ ಹಾಗೂ ರೈತ ಉತ್ಪಾದಕ ಸಂಘವನ್ನು ಪ್ರಾರಂಭಿಸಿದ್ದು ಕಡಿಮೆ ದರದಲ್ಲಿ ರೈತರಿಗೆ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆಗೆ ಒದಗಿಸುತ್ತಿದೆ.

ಸಂಸ್ಥೆಯ ಏಳ್ಗೆಗಾಗಿ ನಾನು ಕ್ರಮಿಸಿದ ದೂರ ಅದೆಷ್ಟೋ? ಇರುಳಿಗೆ ನಿದ್ದೆಯನು ಬಲಿಕೊಟ್ಟ ದಿನಗಳೆಷ್ಟೊ ಗೊತ್ತಿಲ್ಲಾ. ಜಯಂತ ಕಾಯ್ಕಿಣಿಯವರು ಹೇಳುವ ಮಾತಿನಂತೆ **"ಎಂಥದೇ ಇರುಳನ್ನು ದಾಟಬಹುದು ಹಚ್ಚಿಟ್ಟ ಕಂದೀಲು ಕೈಲಿದ್ದರೆ, ಹಣೆಬರಹವ ಕೈಯಾರೆ ಬರೆಯಬಹುದು ಎದೆಯಲಿ ಅಕ್ಷರವ ಬಿತ್ತಿದ್ದರೆ"** ಎಂಬ ಮಾತು ನಿಜಕ್ಕೂ ಸತ್ಯ. ಸಂಸ್ಥೆಯ ಆರಂಭದ ದಿನದಿಂದ ಇಲ್ಲಿಯವರೆಗೆ ತಾವೆಲ್ಲರೂ ಕಾಲ–ಕಾಲಕ್ಕೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಿ ಪ್ರೋತ್ಸಾಹಿಸಿದ್ದೀರಿ. ಬೆಂಬಲಿಸಿ ಪ್ರೋತ್ಸಾಹಿಸಿದ ತಮ್ಮೆಲ್ಲರಿಗೂ ನಾನು ಆಭಾರಿ. ಸಂಸ್ಥೆಯನ್ನು ಸಬಲಗೊಳಿಸಲು ಸೂಕ್ತ ಮಾರ್ಗದರ್ಶನವನ್ನು ನೀಡಿ ನೆರವಾದ ನಮ್ಮ ಸಂಸ್ಥೆಯ ನಿರ್ದೇಶಕ ಮಂಡಳಿಯ ಸದಸ್ಯರಿಗೂ, ಯೋಜನೆಯ ಅನುಷ್ಠಾನ ಕಾರ್ಯದಲ್ಲಿ ಹಗಲಿರುಳೆನ್ನದೆ ಶ್ರಮಿಸಿದ ಸಂಸ್ಥೆಯ ಎಲ್ಲಾ ಸಿಬ್ಬಂದಿ ವರ್ಗದವರಿಗೂ ನಾನು ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ.

ಮುಂದಿನ ದಿನಗಳಲ್ಲಿಯೂ ಇದೇ ರೀತಿಯಲ್ಲಿ ಯೋಗ್ಯ ಸಲಹೆ ಸೂಚನೆಗಳನ್ನು ನೀಡಿ ಪ್ರೊತ್ಸಾಹಿಸಿ, ಬೆಂಬಲಿಸಿ ಎಂದು ಹೇಳುತ್ತಾ ತಮ್ಮೆಲ್ಲರಿಗೂ ವಂದನೆಗಳನ್ನು ತಿಳಿಸುತ್ತಿದ್ದೇನೆ.

ಧನ್ಯವಾದಗಳೊಂದಿಗೆ,

**ಶ್ರೀ ಗಣಪತಿ ಭಟ್ಟ**
**ನಿರ್ದೇಶಕರು, ಮನುವಿಕಾಸ, ಶಿರಸಿ**



# ಸಂಸ್ಥಾಪಕರ ಮಾತು

ಬದುಕು ಎಂದಿಗೂ ನಿಂತ ನೀರಲ್ಲ, ನದಿಯ ಹಾಗೆ ಸರಾಗವಾಗಿ ಹರಿಯುತ್ತಲೇ ಇರುವ ಪಯಣ. ಮನುವಿಕಾಸ ಸಂಸ್ಥೆಯು ಸಿದ್ದಾಪುರ ತಾಲೂಕಿನ ಕರ್ಜಗಿಯಲ್ಲಿ ಆರಂಭಗೊಂಡು, 2003ನೇ ಇಸವಿಯಲ್ಲಿ ನೋಂದಣಿಗೊಂಡಿತು. ನನ್ನ ಬದುಕಿನ ಸಾಕಷ್ಟು ಹೆಜ್ಜೆಗಳಲ್ಲಿ ಧೃತಿಗೆಡದೆ ಸೋಲನ್ನೇ ಸವಾಲಾಗಿ ಸ್ವೀಕರಿಸಿ, ಮನುವಿಕಾಸ ಎಂಬ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಯನ್ನು ಹುಟ್ಟು ಹಾಕಿ, ಎರಡು ದಶಕಗಳ ಹಾದಿಯನ್ನು ಅದು ಪೂರ್ಣಗೊಳಿಸಿದೆ.

ಎಲ್ಲಾ ಮೂಲಭೂತ ಸೌಕರ್ಯಗಳನ್ನು ಸರ್ಕಾರವೇ ಪ್ರತಿಯೊಬ್ಬ ಮನುಷ್ಯನಿಗೂ ತಲುಪಿಸಲು ಸಾಧ್ಯವಿಲ್ಲ. ಶಿವರಾಮ ಕಾರಂತರು ಹೇಳುವ ಮಾತಿನಂತೆ "ಮನುಷ್ಯ ಮಾನವ ಕುಲದ ಹಿತಕ್ಕಾಗಿ ಮಾತ್ರವಲ್ಲ, ಎಲ್ಲಾ ಜೀವಿಗಳ ಹಿತಕ್ಕಾಗಿಯೂ ಬಾಳುವ ರೀತಿಯನ್ನು ಕಲಿತರೆ, ಆಗ ನಾವು ನಾಗರಿಕತೆಯ ಹೊಸ್ತಿಲನ್ನು ದಾಟಿದ ಮನುಷ್ಯರೆನಿಸುತ್ತೇವೆ”. ನಿಸ್ವಾರ್ಥವಾದ ಸೇವೆಯಿಂದಲೇ ಉತ್ತಮ ನಾಗರಿಕ ಸಮಾಜವನ್ನು ಕಟ್ಟಲು ಸಾಧ್ಯವಾಗುವುದು.

ಆರೋಗ್ಯ, ಶಿಕ್ಷಣ, ಪರಿಸರ, ಜಲ ಸಂರಕ್ಷಣೆ, ಮಹಿಳಾ ಸಬಲೀಕರಣ ಮೊದಲಾದವನ್ನು ಮುಖ್ಯ ಧ್ಯೇಯವನ್ನಾಗಿಸಿಕೊಂಡು ಮನುವಿಕಾಸ ಸಂಸ್ಥೆಯು ಬಡವ, ಶೋಷಿತ, ಅಶಕ್ತ, ಕೃಷಿಕರು, ಮಹಿಳೆಯರು, ಬುಡಕಟ್ಟು ಜನಾಂಗ ಹೀಗೆ ವಿವಿಧ ವಲಯದ ಏಳ್ಗೆಗಾಗಿ ಹಗಲಿರುಳು ದಣಿವಿಲ್ಲದೆ ಶ್ರಮಿಸಿದೆ.

ನನ್ನ ಅಜ್ಜನ ಕಾಲದಲ್ಲಿ ನಮ್ಮ ಮನೆಯಲ್ಲಿಯೆ ರೈತರಿಗೆ ಅನುಕೂಲವಾಗಲೆಂದು ಸಹಕಾರಿ ಸಂಘವನ್ನು ಸ್ಥಾಪಿಸಲಾಗಿತ್ತು. ಕಾರಣಾಂತರಗಳಿಂದ ಅದನ್ನು ಬೇರೆಡೆ ಸ್ಥಳಾಂತರಿಸಲಾಯಿತು. ಜನರಿಗೆ ನೆರವಾಗಲು ಸಹಕಾರಿ ಸಂಘವನ್ನು ಪ್ರಾರಂಭಿಸುವುದು ನನ್ನ ಕನಸಿನ ಕೂಸಾಗಿತ್ತು. ಪ್ರಗತಿಮಿತ್ರ ಸಹಕಾರಿ ಸಂಘ ಸ್ಥಾಪಿಸಿ 3500ಕ್ಕೂ ಅಧಿಕ ಸದಸ್ಯರನ್ನು ಸೇರ್ಪಡೆಗೊಳಿಸಿದ್ದಾರೆ. ಈ ನನ್ನ ಕನಸಿಗೆ ನೀರೆರೆದು ಬೆಳೆಸಿದ ಕೀರ್ತಿ ನನ್ನ ಮಗ ಗಣಪತಿ ಭಟ್ಟರಿಗೂ ಹಾಗೂ ಬಾಳೆಗದ್ದೆಯ ವಿವೇಕ ಹೆಗಡೆಯವರಿಗೆ ಸಲ್ಲುವುದು.

ಮನುವಿಕಾಸವನ್ನು ಕಟ್ಟಿದ ಆರಂಭದ ವರ್ಷಗಳಲ್ಲಿ ಸಂಸ್ಥೆಯ ಸೇವೆಯನ್ನು ಜನರಿಗೆ ತಲುಪಿಸಲು ಮೋಟಾರ್ ಬೈಕ್‌ನಲ್ಲಿ ಶ್ರಮಿಸಿದ ನೆನಪು ಅಚ್ಚಳಿಯದೆ ಹಾಗೆ ಉಳಿದಿದೆ. ಸಂಸ್ಥೆಯನ್ನು ಬೆಳೆಸುವಾಗ ಸಿಬ್ಬಂದಿಗಳು ನೀಡಿದ ಸಹಕಾರವು ಅತ್ಯಮೂಲ್ಯವಾದದ್ದು. ಬಾಳೆಗದ್ದೆಯಲ್ಲಿ ಪ್ರಗತಿಮಿತ್ರ ರೈತ ಉತ್ಪಾದಕ ಕಂಪನಿಗೆ ಸೂಕ್ತ ಸ್ಥಳಾವಕಾಶವನ್ನು ಒದಗಿಸಿಕೊಟ್ಟ ಶ್ರೀ ಅನಂತ ಹೆಗಡೆಯವರ ಕೊಡುಗೆಯನ್ನ ಈ ಸಂದರ್ಭದಲ್ಲಿ ನಾನು ಸ್ಮರಿಸಲೇಬೇಕು.

ಮನುವಿಕಾಸ, ಪ್ರಗತಿ ಮಿತ್ರ ಸಂಸ್ಥೆ, ಹಾಗೂ ನಮ್ಮೆಲ್ಲಾ ರೈತ ಉತ್ಪಾದಕ ಸಂಸ್ಥೆಗಳಿಗೆ ತಾವೆಲ್ಲರೂ ಅಭೂತಪೂರ್ವ ಸಲಹೆ, ಸಹಕಾರವನ್ನು ನೀಡಿದ್ದೀರಿ. ಮುಂದಿನ ದಿನಗಳಲ್ಲಿಯೂ ತಮ್ಮಿಂದ ಇದೇ ಬಗೆಯ ಸಹಕಾರವನ್ನು ಬಯಸುತ್ತೇವೆ. ಸಂಸ್ಥೆಯು ಇನ್ನೂ ಹೆಚ್ಚಿನ ಯಶಸ್ಸನ್ನು ಗಳಿಸಿ ಜನರಿಗೆ ನಮ್ಮ ಸೇವೆ ತಲುಪುವಂತಾಗಲಿ ಎಂದು ಆಶಿಸುತ್ತೇನೆ.

ಶುಭವಾಗಲಿ.

**ಶ್ರೀ ಹರಿಶ್ಚಂದ್ರ ಭಟ್ಟ ಕರ್ಜಗಿ**
**ಸಂಸ್ಥಾಪಕರು**
**ಮನುವಿಕಾಸ ಸಂಸ್ಥೆ ಶಿರಸಿ**

# ಮನುವಿಕಾಸ ಮತ್ತು ಜಲ ಸಂರಕ್ಷಣೆಯ ಪಯಣ

ಸಿದ್ದಾಪುರ ತಾಲೂಕಿನ ಕರ್ಜಗಿ ಎಂಬ ಗ್ರಾಮದಲ್ಲಿ 2003ನೇ ಇಸ್ವಿಯಲ್ಲಿ ಪ್ರಾರಂಭವಾದ ಮನುವಿಕಾಸ ಸಂಸ್ಥೆಯು ಇಂದು ಉತ್ತರಕನ್ನಡ, ಹಾವೇರಿ, ಧಾರವಾಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ 225 ಕೆರೆಗಳನ್ನು ಪುನರುಜ್ಜೀವನಗೊಳಿಸಿದೆ. ಕರ್ನಾಟಕದ ಇತಿಹಾಸದಲ್ಲಿ ಇದೊಂದು ಮಹತ್ವಪೂರ್ಣ ಸಾಧನೆಯಾಗಿದ್ದು, ಸಂಸ್ಥೆಯು ಸರ್ಕಾರದ ಯಾವುದೇ ಅನುದಾನವನ್ನು ಪಡೆಯದೇ ಕೇವಲ ದಾನಿ ಸಂಸ್ಥೆಗಳಿಂದ ಹಣಕಾಸಿನ ನೆರವನ್ನು ಪಡೆದು ರೈತರ ಸಹಭಾಗಿತ್ವದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕೆರೆ ಪುನರುಜ್ಜೀವನಗೊಳಿಸಿರುವುದು ವಿಶೇಷ.

"ಸಾರ್ ನಮ್ಮೂರಾಗೂ ಒಂದು ಕೆರೆ ಐತ್ರಿ ನೀವು ಬಂದು ಕೆರೆ ಹೂಳೆತ್ತಿ ಕೊಟ್ಟಿದ್ರ ಕೃಷಿಗೂ ಅನುಕೂಲ ಆಗಿ ದನಕರಿಗೂ ಕುಡಿಯಾಕ ನೀರು ಕೊಟ್ಟು ಭಾಳ ಉಪಕಾರ ಮಾಡಿ ಕೊಟ್ಟಂಗ ಆಕ್ಕೈತ್ರಿ" ಎಂದು ಹಳ್ಳಿಯ ಕೆಲ ಉತ್ಸಾಹಿ ರೈತರು ಹೇಳುತ್ತಿದ್ದ ಮಾತು. ಮಳೆಗಾಲದಲ್ಲಿ ಅತಿವೃಷ್ಟಿಯಿಂದಾಗಿ ಕೆಲವು ಕೆರೆಗಳು ಮೈದುಂಬಿಕೊಂಡು ಕೋಡಿ ಒಡೆದೋ ಇಲ್ಲವೇ ರೈತರ ಜಮೀನಿಗೆ ನೀರು ನುಗ್ಗಿ ರೈತರು ಬೆಳೆದ ಬೆಳೆಗಳು ಕೆರೆ ಪಾಲಾಗುತ್ತಿದ್ದವು. ಬೇಸಿಗೆಯಲ್ಲಿ ಬೆಳೆ ಬೆಳೆಯಲು ನೀರಿನ ಅಭಾವ ಕಂಡು ಬರುತ್ತಿತ್ತು.


ಕೆರೆಗಳಿಗೆ ವರ್ಷದಿಂದ ವರ್ಷಕ್ಕೆ ಹೂಳು ತುಂಬಿಯೋ ಅಥವಾ ಅತಿಕ್ರಮಣದಿಂದಾಗಿಯೊ ಕೆರೆ ತನ್ನ ಮೂಲ ರೂಪವನ್ನೇ ಕಳೆದುಕೊಳ್ಳುತ್ತಿದೆ. ಮನುವಿಕಾಸ ಸಂಸ್ಥೆಯ ಜನಪ್ರಿಯ ಯೋಜನೆಯಾದ "ಕೆರೆಗಳ ಪುನರುಜ್ಜೀವನ ಕಾರ್ಯಕ್ರಮ" ರೈತರ ಇವೆಲ್ಲಾ ಸಮಸ್ಯೆಗಳಿಗೂ ಪರಿಹಾರವನ್ನು ಮಾಡಿಕೊಟ್ಟಿದೆ. ಕೆರೆ ಎಂಬುದು ಕೇವಲ ನೀರಿನ ಮೂಲ ಮಾತ್ರ ಆಗಿರುವುದಿಲ್ಲ. ಆ ಊರಿನ ಆರ್ಥಿಕತೆ, ಅಲ್ಲಿಯ ಸಾಮಾಜಿಕ, ಭೌಗೋಳಿಕ ಅಂಶವನ್ನು ಕೆರೆ ಒಳಗೊಂಡಿರುತ್ತದೆ. ಊರಿನ ಕೆರೆಯು ತನ್ನ ಒಡಲಲ್ಲಿ ಸಂಪಾಗಿ ನೀರನ್ನು ತುಂಬಿಕೊಂಡಿದ್ದರೆ, ರೈತರು ವರ್ಷಕ್ಕೆ ಎರಡು ಬೆಳೆಗಳನ್ನು ಬೆಳೆದು ಒಳ್ಳೆಯ ಆದಾಯ ಪಡೆದುಕೊಂಡು ಉತ್ತಮ ಕೃಷಿ ಬದುಕನ್ನು ಕಟ್ಟಿಕೊಳ್ಳಲು ಸಹಾಯಕವಾಗುತ್ತದೆ.

ಅದೆಷ್ಟೋ ಜಲಚರಗಳಿಗೆ ಕೆರೆಗಳು ಆವಾಸ ಸ್ಥಾನವಾಗಿದೆ. ಕೃಷಿ, ಅಂತರ್ಜಲ ಮಟ್ಟ ಸುಧಾರಣೆಗೆ, ದನಕರುಗಳಿಗೆ ಕುಡಿಯಲು ನೀರು, ದೈನಂದಿನ ಉಪಯೋಗಕ್ಕೆ ಹೀಗೆ ನಾನಾ ರೀತಿಯಲ್ಲಿ ಕೆರೆಯು ಅನುಕೂಲವನ್ನು ಮಾಡಿಕೊಡುತ್ತಿದೆ. ಇಷ್ಟೊಂದು ಅನುಕೂಲ ಮಾಡಿಕೊಡುವ ಕೆರೆಗಳು ಕೆಲವು ಕಡೆಗಳಲ್ಲಿ ಅವಸಾನದ ಅಂಚಿನಲ್ಲಿವೆ, ಅಂತಹ ಕೆರೆಗಳನ್ನು ಮನುವಿಕಾಸ ಸಂಸ್ಥೆಯು ಗುರುತಿಸಿ ಹೂಳೆತ್ತಿ ಪುನರುಜ್ಜೀವನಗೊಳಿಸುವ ಕಾಯಕ ಮಾಡುತ್ತಿದೆ.

ಕೆರೆಗಳ ಪುನರುಜ್ಜೀವನ ಕಾರ್ಯದಿಂದಾಗಿ ನೀರು ಸಂಗ್ರಹಣಾ ಸಾಮರ್ಥ್ಯ ಹೆಚ್ಚಿ ಅಂತರ್ಜಲ ಮಟ್ಟವನ್ನು ಅಭಿವೃದ್ಧಿಪಡಿಸುವುದರೊಂದಿಗೆ ಮೀನು ಸಾಕಾಣಿಕಾ ಕೃಷಿಯನ್ನೂ ಸಹ ಮಾಡಬಹುದಾಗಿದೆ. ಕೆರೆಗಳ ವಿಸ್ತೀರ್ಣದ ಆಧಾರದ ಮೇಲೆ ಮೀನಿನ ಮರಿಗಳನ್ನು ಮತ್ಸ್ಯೋದ್ಯಮ ಇಲಾಖೆಯಿಂದ ಪಡೆಯಬಹುದಾಗಿದ್ದು, ಒಂದು ವರ್ಷದ ಒಳಗೆ ಒಳ್ಳೆಯ ಮೀನಿನ ಫಸಲಿನ ಲಾಭವನ್ನು ಪಡೆಯಬಹುದು, ಬಂದಂತಹ ಲಾಭವನ್ನುಊರಿನ ಅಭಿವೃದ್ಧಿಗೆ ಬಳಸಲು ಫಲಪ್ರದವಾಗುತ್ತದೆ.

ಮನುವಿಕಾಸ ಸಂಸ್ಥೆಯು ವಿವಿಧ ಸಂಘ ಸಂಸ್ಥೆಗಳಿಂದ ದೇಣಿಗೆಯನ್ನು ಸಂಗ್ರಹಿಸಿ ಅದರಿಂದ ಹೂಳೆತ್ತಲು ಬೇಕಾದ ಯಂತ್ರಗಳನ್ನು ರೈತರಿಗೆ ಒದಗಿಸುತ್ತಿದೆ. ಹೂಳೆತ್ತಿದ ಮಣ್ಣನ್ನು ರೈತರು ತಮ್ಮ ಸ್ವಂತ ಖರ್ಚಿನಲ್ಲಿ ತಮ್ಮ ಹೊಲಗಳಿಗೆ ಸಾಗಿಸಬೇಕಾಗುತ್ತದೆ. ಸಂಸ್ಥೆಯು ಈಗಾಗಲೇ ಶಿರಸಿ, ಮುಂಡಗೋಡ, ಹಾನಗಲ್, ಸೊರಬ, ಶಿಗ್ಗಾವ್, ಬ್ಯಾಡಗಿ, ಕಲಘಟಗಿ ತಾಲೂಕುಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಇತ್ತೀಚೆಗೆ ಹುಬ್ಬಳ್ಳಿ ಕುಂದಗೋಳ ತಾಲೂಕಿನಲ್ಲೂ ಕೆರೆ ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಿದೆ. ಎಲ್ಲಾ ಕಡೆಗಳಿಂದ ರೈತರ ಸಹಭಾಗಿತ್ವ ಮತ್ತು ಪ್ರೋತ್ಸಾಹ ಸಂಸ್ಥೆಗೆ ಅತ್ಯುತ್ತಮವಾಗಿ ದೊರಕುತ್ತಿದೆ. ಸ್ಥಳೀಯ ಗ್ರಾಮ ಪಂಚಾಯತ ಸದಸ್ಯರು ಮತ್ತು ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಸಂಸ್ಥೆಗೆ ಬೇಕಾದ ಅನುಮತಿ ಪತ್ರವನ್ನು ಒದಗಿಸಿ ಕೆರೆ ಅಭಿವೃದ್ಧಿ ಆದ ನಂತರ ಕೆರೆಯನ್ನು ಬಂದು ವೀಕ್ಷಿಸಿ ಪ್ರಶಂಸಿಸುವುದರೊಂದಿಗೆ ಶ್ಲಾಘನಾ ಪತ್ರವನ್ನು ಕೂಡ ನೀಡಿ ಇನ್ನಷ್ಟು ಕೆಲಸ ಮಾಡಲು ಸಂಸ್ಥೆಗೆ ಪ್ರೇರೇಪಣೆ ನೀಡಿದ್ದಾರೆ. ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದಿಂದ ಕೃಷಿ ಸಮ್ಮಾನ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಲಾಗಿದೆ. ಯಸ್ ಬ್ಯಾಂಕ್ ನಿಂದ ಯಸ್! ಐ ಆ್ಯಮ್ ದ ಚೇಂಜ್ (Yes! I am the Change) ಪುರಸ್ಕಾರ, ರೋಟರಿ ಸಂಸ್ಥೆಯಿಂದ ಮೋತಿ ಬಾಯಿ ದೋಶಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಮನುವಿಕಾಸ ಸಂಸ್ಥೆಯು ನುರಿತ ಅನುಭವಿ ಯುವ ಸಿಬ್ಬಂದಿ ರಂಗವನ್ನು ಹೊಂದಿದೆ. ಸಂಸ್ಥೆಯು ತಾಂತ್ರಿಕ ತಂಡ, ದಾಖಲಾತಿ ತಂಡ, ಮೌಲ್ಯ ಮಾಪನ ತಂಡ, ನಿರ್ವಹಣಾ ತಂಡ ಈ ರೀತಿ ಬೇರೆ ಬೇರೆ ವಿಭಾಗಗಳಲ್ಲಿ ಕೆಲಸ ಮಾಡುವ ನುರಿತ ಸಿಬ್ಬಂದಿ ವರ್ಗವನ್ನು ಹೊಂದಿದೆ. ರೈತರು,



ಸ್ಥಳೀಯ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳೊಂದಿಗೆ ಸಂಸ್ಥೆಯ ಸಿಬ್ಬಂದಿಗಳು ಉತ್ತಮ ಸಂವಹನವನ್ನು ಹೊಂದಿ ರೈತರನ್ನು ಒಗ್ಗೂಡಿಸಿ ಕೆರೆ ಬಳಕೆದಾರರ ಸಂಘವನ್ನು ರಚಿಸಿ ಕೆರೆ ಪುನರುಜ್ಜೀವನಗೊಳಿಸುವಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುತ್ತಿದ್ದಾರೆ.

## ಮನುವಿಕಾಸದ ಸಾಧನೆಯ ಪಕ್ಷಿನೋಟ

- 3813 ಕೃಷಿಹೊಂಡಗಳನ್ನು ಅಭಿವೃದ್ಧಿಪಡಿಸಿದ್ದು ಪ್ರತಿ ವರ್ಷ 3012 ಮಿಲಿಯನ್ ಲೀಟರ್ ನಷ್ಟು ನೀರನ್ನು ಕೃಷಿಹೊಂಡವು ಸಂಗ್ರಹಿಸುತ್ತಿದೆ.
- 3 ರಿಂದ 30 ಎಕರೆ ವಿಸ್ತೀರ್ಣದ 225 ಕೆರೆಗಳನ್ನು ಅಭಿವೃದ್ಧಿಪಡಿಸಿದೆ ಹಾಗೆಯೇ ಅಂದಾಜು 1668 ಮಿಲಿಯನ್ ಲೀಟರ್ ನಷ್ಟು ನೀರನ್ನು ಪ್ರತಿ ವರ್ಷ ಸಂಗ್ರಹಿಸುತ್ತಿದೆ.
- ಕೆರೆ ಪುನರುಜ್ಜೀವನ ಯೋಜನೆಯಿಂದಾಗಿ 15406 ಹೆಕ್ಟೇರ್ ಕೃಷಿ ಭೂಮಿಗೆ ಅಗತ್ಯ ನೀರಾವರಿ ಸೌಲಭ್ಯವನ್ನು ಒದಗಿಸಿದ್ದು, ಈ ಯೋಜನೆಯಿಂದಾಗಿ 11451 ಕ್ಕೂ ಹೆಚ್ಚು ರೈತರಿಗೆ ಅನುಕೂಲವಾಗಿದೆ. ಇದರಿಂದ ರೈತರು ಕೃಷಿಯಲ್ಲಿ ಹೆಚ್ಚಿನ ಇಳುವರಿ ಪಡೆಯಲು ಸಹಕಾರಿಯಾಗಿದೆ.
- ಕೃಷಿ ಹೊಂಡ ನಿರ್ಮಾಣದಿಂದಾಗಿ 7000 ಹೆಕ್ಟೇರ್‌ಗೂ ಅಧಿಕ ತೋಟಗಾರಿಕಾ ಪ್ರದೇಶವು ಅನುಕೂಲ ಪಡೆದಿದೆ.
- 800 ಎಕರೆ ಕೃಷಿ ಭೂಮಿಗೆ ಸಿಸ್ಟಮ್ ಅಫ್ ರೈಸ್ ಇಂಟೆನಸಿಫಿಕೇಶನ್ (SRI) ಎಂಬ ವಿಧಾನವನ್ನು ಅಳವಡಿಸಿಕೊಳ್ಳಲು ಸಹಾಯ ಮಾಡಿದ್ದು ಇದರಿಂದಾಗಿ ರೈತರು 30% ಹೆಚ್ಚಿನ ಇಳುವರಿಯನ್ನು ಪಡೆಯುತ್ತಿದ್ದಾರೆ.
- 2640 ಸ್ವ ಸಹಾಯ ಗುಂಪು ಹಾಗೂ 1500 ಜಂಟಿ ಬಾಧ್ಯತಾ ಗುಂಪುಗಳನ್ನು ರಚಿಸಿ ಆದಾಯ ಉತ್ಪಾದನಾ ಚಟುವಟಿಕೆಗಳಿಗೆ 50 ಕೋಟಿಗೂ ಅಧಿಕ ಸಾಲ ಸೌಲಭ್ಯವನ್ನು ಒದಗಿಸಿದೆ.
- ಸಂಸ್ಥೆಯ ಬಲವರ್ಧನೆ ಅಡಿಯಲ್ಲಿ ಕೃಷಿ ಮತ್ತು ಕೃಷಿಯೇತರ ಉತ್ಪನ್ನಗಳ ಮೌಲ್ಯವರ್ಧನೆಗಾಗಿ ಮಧ್ಯವರ್ತಿಗಳ ಹಾವಳಿ ತಪ್ಪಿಸಲು ಹಾಗೂ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಸೌಲಭ್ಯ ಒದಗಿಸಿಕೊಡಲು 4 ರೈತ ಉತ್ಪಾದಕ ಸಂಸ್ಥೆಗಳನ್ನು ಆರಂಭಿಸಿದೆ.
- 2025 ಬಡ ಮತ್ತು ಅನಾಥ ಮಕ್ಕಳಿಗೆ ಶಿಕ್ಷಣವನ್ನು ಮುಂದುವರೆಸಲು ಅಗತ್ಯವಿರುವ ಕಲಿಕಾ ಸಾಮಗ್ರಿ ಹಾಗೂ ವಿದ್ಯಾರ್ಥಿ ವೇತನವನ್ನು ನೀಡಿದೆ.
- ಕಡಿಮೆ ಆದಾಯವಿರುವ 2000 ಕುಟುಂಬಗಳಿಗೆ ಸಣ್ಣ ಸಾಲ (Micro Loan) ಸೌಲಭ್ಯವನ್ನು ಒದಗಿಸಿಕೊಟ್ಟಿದೆ.
- ಹೊಗೆ ರಹಿತ 150 ಅಸ್ತ್ರ ಒಲೆ ಹಾಗೂ 250 ಅಡುಗೆ ಒಲೆಗಳನ್ನು ಅಭಿವೃದ್ಧಿಪಡಿಸಿದೆ.
- ಜೀವ ವೈವಿಧ್ಯತೆಯ ಅಧ್ಯಯನದ ವರದಿಯನ್ನು ಸಿದ್ಧಪಡಿಸಿದೆ.
- ಸಮುದಾಯದ ಬೆಟ್ಟ ಮತ್ತು ಅರಣ್ಯ ಭೂಮಿಯಲ್ಲಿ 15607 ಇಂಗು ಗುಂಡಿಗಳನ್ನು ಅಭಿವೃದ್ಧಿಪಡಿಸಿದೆ.
- ಕೌಶಲ್ಯ ತರಬೇತಿಗಳಾದ ವಾಹನ ಚಾಲನೆ, ಕಂಪ್ಯೂಟರ್, ಬ್ಯೂಟೀಶಿಯನ್, ಆಹಾರ ತಯಾರಿಕಾ ತರಬೇತಿ, ಹೊಲಿಗೆ ತರಬೇತಿ, ಸುಸ್ಥಿರ ಕೃಷಿ ತರಬೇತಿ ಮತ್ತು ಹೈನುಗಾರಿಕೆ ತರಬೇತಿಯನ್ನು 4578 ಮಹಿಳೆಯರಿಗೆ ನೀಡಿ ಸ್ವ ಉದ್ಯೋಗಕ್ಕೆ ಪ್ರೇರೇಪಿಸಿದೆ.
- " ಇಂಟರ್‌ನೆಟ್ ಸಾಥಿ" ಎಂಬ ಯೋಜನೆ ಅಡಿಯಲ್ಲಿ 1.79 ಲಕ್ಷ ಮಹಿಳೆಯರಿಗೆ ಅಂತರ್ಜಾಲ ಸಾಕ್ಷರತೆಯನ್ನು ಕಲ್ಪಿಸಿದೆ.
- ಚೌಬಿನೇತರ ಉತ್ಪನ್ನ ಮತ್ತು ಹಣ್ಣಿನ ಗಿಡಗಳಿಗೆ ಮಹತ್ವ ಕೊಟ್ಟು 44000 ಕ್ಕೂ ಅಧಿಕ ಸಸಿಗಳನ್ನು ನೆಡುವ ಕಾರ್ಯವನ್ನು ಮಾಡಿದೆ.
- ಕೋವಿಡ್-19ರ ಸಂದರ್ಭದಲ್ಲಿ 6000 ಕ್ಕೂ ಹೆಚ್ಚು ಕುಟುಂಬಗಳಿಗೆ ಉಚಿತ ಆಹಾರ ಕಿಟ್‌ಗಳನ್ನು ಮನುವಿಕಾಸ ಒದಗಿಸಿದೆ.
- ಶಿರಸಿ ಮತ್ತು ಸಿದ್ದಾಪುರ ತಾಲೂಕು ಆಸ್ಪತ್ರೆಗಳಿಗೆ ಕೋವಿಡ್ ಸಂಬಂಧಿತ ವೈದ್ಯಕೀಯ ಉಪಕರಣಗಳನ್ನು ನೀಡಿದೆ.
- ಕೋವಿಡ್ ಸಮಯದಲ್ಲಿ ಗ್ರಾಮೀಣ ಭಾಗದ 25,000ಕ್ಕೂ ಹೆಚ್ಚಿನ ಜನರಿಗೆ ಉಚಿತ ಲಸಿಕೆಯನ್ನು ನೀಡಲು ಸಹಕರಿಸಿದೆ.
- ಪ್ರಗತಿ ಮಿತ್ರ ಸಂಸ್ಥೆಯ ಸಹಾಯದೊಂದಿಗೆ ಸ್ವ ಸಹಾಯ ಸಂಘದ ಮಹಿಳೆಯರ ಸಹಭಾಗಿತ್ವದಲ್ಲಿ 4 ದಿನಸಿ ಅಂಗಡಿಗಳನ್ನು ಪ್ರಾರಂಭಿಸಿದೆ.
- ತೋಟಗಾರಿಕಾ ಕೃಷಿಗೆ ಬೇಕಾಗುವಂತಹ ಕೃಷಿ ಉಪಕರಣಗಳನ್ನು 115 ಸಿದ್ದಿ ಬುಡಕಟ್ಟು ಜನಾಂಗದ ಕುಟುಂಬಗಳಿಗೆ ಉಚಿತವಾಗಿ ನೀಡಿದೆ.
- 61 ಜನರಿಗೆ ಸ್ವ ಉದ್ಯೋಗಕ್ಕೆ ನೆರವು ನೀಡಿ ವ್ಯಾಪಾರ-ಉದ್ಯೋಗ ಮಾಡಲು ಬೇಕಾಗುವಂತಹ ಸಾಮಗ್ರಿಗಳನ್ನು ನೀಡಿದೆ.
- ಒಂದು ಕುಟುಂಬಕ್ಕೆ 10 ಕೋಳಿ ಮರಿಗಳಂತೆ, ಒಟ್ಟೂ 600 ಸಿದ್ದಿ ಕುಟುಂಬಗಳಿಗೆ ಕೋಳಿ ಮರಿಗಳನ್ನು ಉಚಿತವಾಗಿ ವಿತರಿಸಿದೆ.
- 140 ಸಿದ್ದಿ ಕುಟುಂಬಗಳಿಗೆ ತಲಾ 2 ಜೇನು ಪೆಟ್ಟಿಗೆಗಳನ್ನು ವಿತರಿಸಿದೆ.
- ಬೀದಿ ಬದಿಗೆ ಆಹಾರದ ಸ್ಟಾಲ್ ಹಾಕಲು ಆಯ್ದ 10 ಫಲಾನುಭವಿಗಳಿಗೆ ಅಗತ್ಯ ಸಾಮಗ್ರಿಗಳನ್ನು ಒದಗಿಸಿದೆ.
- ಸಿದ್ದಿ ಸಮುದಾಯದ 69 ಯುವಕ-ಯುವತಿಯರಿಗೆ ಆತಿಥ್ಯ ತರಬೇತಿಯನ್ನು ನೀಡಿ ಉದ್ಯೋಗಕ್ಕೆ ಉತ್ತೇಜನ ನೀಡಿದೆ.
- ಕುಂದಾಪುರ ತಾಲೂಕಿನ 20 ಫಲಾನುಭವಿಗಳಿಗೆ ಒಣ ಮೀನು ಘಟಕವನ್ನು ನಿರ್ಮಿಸಿ ಹಸ್ತಾಂತರಿಸಿದೆ.
- ಕುಂದಾಪುರ ತಾಲೂಕಿನ 10 ಫಲಾನುಭವಿಗಳಿಗೆ ಪಂಜರು ಮೀನು ಕೃಷಿಗೆ ಬೇಕಾದ ಪಂಜರವನ್ನು ನೀಡಿದೆ.
- 5 ಸ್ವ ಸಹಾಯ ಸಂಘಗಳಿಗೆ ಮೀನು ವ್ಯಾಪಾರ ಮಾಡಲು ಅನುಕೂಲವಾಗಲು ಡೀ-ಫ್ರೀಜರ್‌ನ್ನು ಉಚಿತವಾಗಿ ನೀಡಿದೆ.
- ಮೀನುಗಳನ್ನು ಶೇಖರಿಸಿಡಲು 75 ಮಹಿಳೆಯರಿಗೆ ಐಸ್ ಬಾಕ್ಸ್ ಗಳನ್ನು ಉಚಿತವಾಗಿ ನೀಡಿದೆ.







# ಮನುವಿಕಾಸದ ಕಾಳಜಿ, ರೈತ ಉತ್ಪಾದಕ ಕಂಪನಿಗಳಿಂದ ಕೃಷಿಕರ ಶ್ರೇಯೋಭಿವೃದ್ಧಿ

ಉತ್ತರಕನ್ನಡ ಜಿಲ್ಲೆಯ ಕರಾವಳಿ ಭಾಗದ ಹೆಚ್ಚಿನ ಜನರ ಮುಖ್ಯ ಕಸುಬು ಮೀನುಗಾರಿಕೆಯಾಗಿದ್ದು ಈ ಉದ್ಯೋಗವನ್ನೇ ನಂಬಿ ಅಲ್ಲಿಯ ಜನರು ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ದರ ಏರಿಳಿತ, ಸಂಗ್ರಹಣಾ ವ್ಯವಸ್ಥೆಯ ಕೊರತೆ, ಸಾಗಾಣಿಕಾ ವೆಚ್ಚ ಮತ್ತು ಮಧ್ಯವರ್ತಿಗಳ ಹಾವಳಿಯಿಂದ ಅಲ್ಲಿಯ ಜನರು ಸಾಕಷ್ಟು ತೊಂದರೆ ಅನುಭವಿಸಿ ಬೇಸತ್ತಿದ್ದಾರೆ. ಮೀನುಗಾರರಿಗೆ ಬೆನ್ನೆಲುಬಾಗಿ ನಿಲ್ಲಲು ಮನುವಿಕಾಸ ಸಂಸ್ಥೆಯು ನಬಾರ್ಡ್ ಸಹಯೋಗದಲ್ಲಿ ಅಂಕೋಲಾ ಮತ್ತು ಕಾರವಾರ ಮೀನುಗಾರರಿಗೆ ಅನುಕೂಲವಾಗಲೆಂದು ಕಾರವಾರದಲ್ಲಿ ಉತ್ತರಕನ್ನಡ ಜಿಲ್ಲಾ ಮಹಿಳಾ ಮೀನು ಮಾರಾಟಗಾರರ ಮತ್ತು ಉತ್ಪಾದಕರ ಸಂಘವನ್ನು ಸ್ಥಾಪಿಸಿದೆ. ಹಾಗೆಯೇ ಕಾಸರಕೋಡು ಮೀನು ಉತ್ಪಾದಕರ ಮತ್ತು ಮತ್ಸ್ಯೋದ್ಯಮ ಸಂಘವನ್ನು ಹೊನ್ನಾವರದ ಕಾಸರಕೋಡಿನಲ್ಲಿ ಸ್ಥಾಪಿಸಿ ನೋಂದಣಿ ಮಾಡಲಾಗಿದೆ. ಕಾರವಾರದ FPOದಲ್ಲಿ ಒಣ ಮೀನು ಖರೀದಿ ಮತ್ತು ಮಾರಾಟದೊಂದಿಗೆ ಮೀನಿನ ಬಲೆಯನ್ನು ಸಹ ಮೀನುಗಾರರಿಗೆ ಕೈಗೆಟಕುವ ದರದಲ್ಲಿ ಮಾರಾಟ ಮಾಡಲಾಗುತ್ತಿದೆ. ಕಾಸರಕೋಡು FPOದಲ್ಲಿ ಬುಟ್ಟಿ, ಇನ್ನಿತರ ವಸ್ತುಗಳ ಮಾರಾಟ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ. ಮೀನು ಉತ್ಪನ್ನಗಳ ಮೌಲ್ಯವರ್ಧನೆ ಬಗ್ಗೆ ತರಬೇತಿ ಮತ್ತು ಮಾರುಕಟ್ಟೆಗೆ ನೆರವನ್ನು ನೀಡುವ ಮೂಲಕ ಕರಾವಳಿ ಭಾಗದ ಮಹಿಳಾ ಮೀನುಗಾರರಿಗೆ ಸ್ವ ಉದ್ಯೋಗಕ್ಕೆ ಉತ್ತೇಜನ ನೀಡುವಲ್ಲಿ ಮನುವಿಕಾಸ ಸಂಸ್ಥೆಯು ಸಹಕಾರಿಯಾಗಿದೆ.







ಗೋಕರ್ಣವು ತರಕಾರಿ ಬೆಳೆಗೆ ಸೂಕ್ತವಾದ ಹವಾಗುಣ ($19^0$–$28^0$ ಸೆ.) ಮತ್ತು ಉತ್ತಮ ನೀರು ಬಸಿಯುವ, ಪೋಷಕಾಂಶ ಯುಕ್ತ ಮಣ್ಣು ಹೊಂದಿದೆ. ಸಾಕಷ್ಟು ರೈತರು ಸಣ್ಣ ಮತ್ತು ಅತೀ ಸಣ್ಣ ಭೂ ಹಿಡುವಳಿದಾರರಾಗಿದ್ದು, ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರ ಮತ್ತು ಸಾವಯವ ಗೊಬ್ಬರ ಉಪಯೋಗಿಸಿಕೊಂಡು ತರಕಾರಿಯನ್ನು ಬೆಳೆಯುತ್ತಿದ್ದಾರೆ. ಪ್ರಮುಖವಾಗಿ ತೊಂಡೆಕಾಯಿ, ಹೀರೆಕಾಯಿ, ಹಾಗಲಕಾಯಿ, ಗೋವೆಕಾಯಿ, ಬದನೆಕಾಯಿ, ಸೋರೆಕಾಯಿ, ಬೂದು ಕುಂಬಳಕಾಯಿ, ಸಿಹಿ ಗೆಣಸು, ಕಲ್ಲಂಗಡಿ, ಹಸಿಮೆಣಸು (ಕಡಿಮೆಖಾರದ), ಬಸಳೆಸೊಪ್ಪು, ಇತರೆ ಸೊಪ್ಪು ಮತ್ತು ತರಕಾರಿಗಳನ್ನು ಬೆಳೆಯುತ್ತಾರೆ. ಆದರೆ ರೈತರು ಬೆಳೆದ ಬೆಳೆಗೆ ಸರಿಯಾದ ಮಾರುಕಟ್ಟೆ ವ್ಯವಸ್ಥೆ ಸಿಗದೇ ಮತ್ತು ಮಧ್ಯವರ್ತಿಗಳ ಹಾವಳಿಯಿಂದಾಗಿ ತೊಂದರೆ ಅನುಭವಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಮನುವಿಕಾಸ ಸಂಸ್ಥೆಯು ನಬಾರ್ಡ್ ಸಹಯೋಗದೊಂದಿಗೆ ತರಕಾರಿ ಬೆಳೆಗಾರರಿಗೆ ರೈತ ಉತ್ಪಾದಕ ಸಂಸ್ಥೆಯನ್ನು ಆರಂಭಿಸಿದೆ. ಶೇಂಗಾ ಚಿಕ್ಕಿ ತಯಾರಿಸಿ ಮಾರಾಟ ಮಾಡುವುದರೊಂದಿಗೆ ಸಾವಯುವ ಗೊಬ್ಬರಗಳಾದ ಸಮೃದ್ಧಿ, ಭೂರಕ್ಷ ಹಾಗೂ ಜೈವಿಕ ಕೀಟನಾಶಕಗಳು, ಬೀಜ ಮೊಳಕೆಗೆ ಬಳಸುವ ಟ್ರೇ, ಬಾಡಿಗೆಗೆ ಕೃಷಿ ಯಂತ್ರೋಪಕರಣಗಳು ಮತ್ತು ಕೃಷಿ ಸಲಕರಣೆಗಳನ್ನೂ ಸಹ ಒದಗಿಸುತ್ತಿದೆ.





ಉತ್ತರಕನ್ನಡ ಜಿಲ್ಲೆಯು ಅಡಿಕೆ ಕೃಷಿಯಲ್ಲಿ ಮುಂದಿದೆ ಎನ್ನುವುದು ಎಷ್ಟು ಸತ್ಯವೋ ಮಧ್ಯಮ ಮತ್ತು ಸಣ್ಣ ಹಿಡುವಳಿ ರೈತರು ಹಲವಾರು ಸಮಸ್ಯೆ, ಸವಾಲುಗಳನ್ನು ಎದುರಿಸುತ್ತಿದ್ದಾರೆ ಎನ್ನುವುದೂ ಸಹ ಅಷ್ಟೇ ಸತ್ಯ. ಅಡಿಕೆ ಬೆಳೆಯೊಂದಿಗೆ ತೆಂಗು ಮತ್ತು ಭತ್ತದ ಬೆಳೆಯ ಸಂಸ್ಕರಣೆಯಲ್ಲಿ ಶಿರಸಿ, ಸಿದ್ದಾಪುರ ಹಾಗೂ ಯಲ್ಲಾಪುರ ಭಾಗದ ರೈತರಿಗೆ ಅನುಕೂಲವಾಗಲೆಂದು ಮನುವಿಕಾಸ ಸಂಸ್ಥೆಯು ಶ್ರೀ ಹರಿಶ್ಚಂದ್ರ ಭಟ್ಟ ಹಾಗೂ ಶ್ರೀ ವಿವೇಕ್ ಹೆಗಡೆ ಇವರ ಸಾರಥ್ಯದಲ್ಲಿ ಪ್ರಗತಿಮಿತ್ರ ನಾರ್ಥ್‌ಕೆನರಾ ಫಾರ್ಮರ್ಸ್ ಪ್ರೊಡ್ಯುಸರ್ ಕಂಪನಿ ಲಿಮಿಟೆಡ್‌ಅನ್ನು ಶಿರಸಿಯ ಬಾಳೆಗದ್ದೆಯಲ್ಲಿ ಸ್ಥಾಪನೆ ಮಾಡಿ ಅಭಿವೃದ್ಧಿಪಡಿಸಿದೆ.

ಇಂದಿನ ಯುವ ಪೀಳಿಗೆಯು ನಗರ ಪ್ರದೇಶಗಳಿಗೆ ಉದ್ಯೋಗ ಅರಸಿ ಹೋಗುತ್ತಿರುವುದರಿಂದ ಹಳ್ಳಿಗಳಲ್ಲಿ ರೈತರು ಕೃಷಿ ಚಟುವಟಿಕೆಗಳಲ್ಲಿ ಹಿನ್ನಡೆ ಅನುಭವಿಸುತ್ತಿದ್ದಾರೆ. ಆಳಾಗಿ ದುಡಿ ಅರಸನಾಗಿ ಉಣ್ಣು ಎಂಬ ಗಾದೆ ಮಾತಿನಂತೆ ಉತ್ತರಕನ್ನಡ ಜಿಲ್ಲೆಯ ರೈತರಿಗೆ ಪ್ರಗತಿಮಿತ್ರ ಫಾರ್ಮರ್ಸ್ ಪ್ರೊಡ್ಯುಸರ್ ಕಂಪನಿಯು ಕೃಷಿಯಲ್ಲಿ ತಂತ್ರಜ್ಞಾನವನ್ನು ಅಳವಡಿಸಿ ಅವರಿಗೆ ಕಾರ್ಮಿಕರ ಕೊರತೆಯನ್ನು ನೀಗಿಸಿ ಉತ್ಪಾದನಾ ವೆಚ್ಚವನ್ನು ತಗ್ಗಿಸುತ್ತಿದೆ. ಇಲ್ಲಿ ರೈತರು ತರುವ ಹಸಿ ಅಡಿಕೆಯನ್ನು ಸುಲಿದು, ಬೇಯಿಸಿ, ಒಣಗಿಸಿ ಕೊಡುತ್ತಾರೆ. ಹಾಗೂ ಪ್ರತಿ ಕ್ವಿಂಟಾಲ್‌ಗೆ ತಕ್ಕಂತೆ ತಯಾರಾದ ಒಣ ಅಡಿಕೆಗೆ ಸೇವಾ ಶುಲ್ಕವನ್ನು ಭರಿಸುತ್ತಾರೆ. ಇದರಿಂದ ರೈತರಿಗೆ ಸಂಸ್ಕರಣೆಗೆ ಬೇಕಾಗುವ ಮಾನವ ಸಂಪನ್ಮೂಲ ಕೊರತೆಯು ನೀಗಿ ನೂರಕ್ಕೂ ಹೆಚ್ಚು ಅಡಿಕೆ ಸುಲಿಯುವ ಮಹಿಳೆಯರಿಗೆ ಸುಸ್ಥಿರ ಆದಾಯೋತ್ಪನ್ನ ಚಟುವಟಿಕೆಯೂ ಸಹ ದೊರಕಿದೆ. ಚಾಲಿ ಸುಲಿಯುವ ಸಮಸ್ಯೆ ಎದುರಿಸುತ್ತಿರುವ ರೈತರಿಗೆ ಅವರ ಮನೆ ಬಾಗಿಲಲ್ಲಿ ಯಂತ್ರದ ಮೂಲಕ ಸುಲಿದು ಕೊಡುವ ವ್ಯವಸ್ಥೆಯನ್ನು ಕಂಪನಿ ಮಾಡುತ್ತಿದೆ. ಇದರಿಂದ ಜನರು ಪ್ರಯೋಜನ ಪಡೆಯುತ್ತಿದ್ದು 50%ರಷ್ಟು ಉತ್ಪಾದನಾ ವೆಚ್ಚ ಕಡಿಮೆಯಾಗಿದೆ. ಎರಡನೇ ದರ್ಜೆಯ ಅಡಿಕೆಯನ್ನು ಪಾಲಿಶ್ ಮಾಡಿ ಮೊದಲನೇ ದರ್ಜೆಗೆ ತಂದು ಮೌಲ್ಯವರ್ಧನೆ ಮಾಡಲಾಗುತ್ತಿದೆ. ಕಂಪನಿಯು ತನ್ನ ರೈತ ಸದಸ್ಯರಿಂದ ಅಡಿಕೆಯಲ್ಲದೇ ತೆಂಗಿನಕಾಯಿ, ಕಾಳುಮೆಣಸು, ಕೋಕಂ ಮತ್ತು ಇತರೆ ಅರಣ್ಯ ಪದಾರ್ಥಗಳನ್ನು ಖರೀದಿಸುತ್ತಿದೆ.



# ಮನುವಿಕಾಸಕ್ಕೆ 20ರ ಸಂಭ್ರಮ, 200ಕ್ಕೂ ಹೆಚ್ಚು ಕೆರೆಗಳ ಪುನರುಜ್ಜೀವನ

ಮನುವಿಕಾಸ ಸಂಸ್ಥೆಯು ಒಂದು ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಯಾಗಿದ್ದು, ಕಳೆದೆರಡು ದಶಕದಿಂದ ಉತ್ತರಕನ್ನಡ, ಶಿವಮೊಗ್ಗ, ಹಾವೇರಿ, ಧಾರವಾಡ ಜಿಲ್ಲೆಗಳಲ್ಲಿ ಕೆರೆಗಳನ್ನು ಉಚಿತವಾಗಿ ಹೂಳೆತ್ತಿ ಅಭಿವೃದ್ಧಿಪಡಿಸಿ ಕೆರೆಗಳ ಪುನರುಜ್ಜೀವನ ಕಾರ್ಯವನ್ನು ಮಾಡುತ್ತಿದೆ. ಪ್ರಸ್ತುತ 2022–23 ನೇ ಸಾಲಿನಲ್ಲಿ ಹುಬ್ಬಳ್ಳಿ, ಕುಂದಗೋಳ, ಶಿಗ್ಗಾಂವ್, ಬ್ಯಾಡಗಿ ತಾಲೂಕುಗಳನ್ನು ಹೆಚ್ಚುವರಿಯಾಗಿ ವಿಸ್ತರಿಸಿ ಒಟ್ಟು 11 ತಾಲೂಕುಗಳಲ್ಲಿ ಕೆರೆಗಳ ಅಭಿವೃದ್ಧಿ ಕಾರ್ಯವನ್ನು ಮಾಡುತ್ತಿದೆ. ಇಲ್ಲಿಯವರೆಗೆ 225 ಕೆರೆಗಳನ್ನು ಹೂಳೆತ್ತಿ ಅಭಿವೃದ್ಧಿಪಡಿಸಿ ರೈತಾಪಿ ವರ್ಗದವರಿಗೆ ಅತಿ ಹೆಚ್ಚು ಅನುಕೂಲ ಮಾಡಿ ಕೊಟ್ಟಿದೆ. ಕೆರೆಗಳ ಪುನರುಜ್ಜೀವನ ಕಾರ್ಯದಿಂದಾಗಿ ಕೆರೆಗಳಲ್ಲಿನ ನೀರಿನ ಸಂಗ್ರಹಣಾ ಸಾಮರ್ಥ್ಯ ಹೆಚ್ಚಿದೆ, ಇದರ ಜೊತೆ ಜೊತೆಯಲ್ಲಿ ಕೃಷಿ ಉತ್ಪಾದನಾ ಚಟುವಟಿಕೆಯಲ್ಲಿಯೂ ಸಹ ಗಣನೀಯ ಪ್ರಮಾಣದಲ್ಲಿ ಉತ್ತಮ ಬದಲಾವಣೆಯನ್ನು ಸಾಧಿಸಿದೆ. ಅಂತರ್ಜಲ ಮಟ್ಟದಲ್ಲಿನ ಸುಧಾರಣೆಯೊಂದಿಗೆ ಜೀವ ವೈವಿಧ್ಯ ವ್ಯವಸ್ಥೆಯಲ್ಲಿಯೂ ಸಹ ಗಮನಾರ್ಹ ಬದಲಾವಣೆಗೆ ಕಾರಣವಾಗಿದೆ.

ಮನುವಿಕಾಸ ಸಂಸ್ಥೆಯು ಕೆರೆಗಳನ್ನು ಹೂಳೆತ್ತಿದ ತರುವಾಯ ಗ್ರಾಮ ಪಂಚಾಯತದ ಸಹಕಾರದೊಂದಿಗೆ ಆ ಕೆರೆಗಳನ್ನು ವ್ಯವಸ್ಥಿತ ರೂಪದಲ್ಲಿ ಅಭಿವೃದ್ಧಿಪಡಿಸಿ ಕಾಪಾಡಿಕೊಂಡು ಹೋಗಲು ಕೆರೆ ಕಮೀಟಿಯನ್ನು ರಚಿಸಿದೆ.

## ಕೆರೆ ಕಮೀಟಿಗಳು ಯಾತಕ್ಕಾಗಿ ಬೇಕು ?

- ಕೆರೆಗಳ ಅತಿಕ್ರಮಣ ತಡೆಯಲು
- ಕೆರೆಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಪಡಿಸಿ ಮುನ್ನಡೆಸಿಕೊಂಡು ಹೋಗಲು
- ಕೆರೆಗಳನ್ನು ಸ್ವಚ್ಛವಾಗಿಡಲು.
- ಕೆರೆ ಸಂಪನ್ಮೂಲದ ಯೋಗ್ಯ ರೂಪದಲ್ಲಿ ಸದುಪಯೋಗ ಪಡೆಯಲು.
- ಜೀವ ವೈವಿಧ್ಯತೆ ಸುಧಾರಿಸಲು.
- ಮತ್ಸ್ಯೋದ್ಯಮ ಅಭಿವೃದ್ಧಿಪಡಿಸಲು.



## ಕೆರೆಗಳ ಮಣ್ಣು ಮತ್ತು ನೀರಿನ ಪರೀಕ್ಷೆ

ಮನುವಿಕಾಸ ಸಂಸ್ಥೆಯು ನಿರ್ಮಿಸಿದ ಕೃಷಿ ಹೊಂಡ ಮತ್ತು ಹೂಳೆತ್ತಿದ ಕೆರೆಗಳ ಮಣ್ಣು ಮತ್ತು ನೀರಿನ ಮಾದರಿಯನ್ನು ಪ್ರಯೋಗಾಲಯಗಳಿಗೆ ಕಳುಹಿಸಿ ಪರೀಕ್ಷಾ ವರದಿಯನ್ನು ರೈತರಿಗೆ ತಲುಪಿಸುತ್ತಿದೆ. ಬೇಸಾಯದಲ್ಲಿ ಮಣ್ಣಿನ ಆರೋಗ್ಯ ಬಹಳ ಮುಖ್ಯವಾಗಿದ್ದು, ಮಣ್ಣು ಮತ್ತು ನೀರಿನ ಗುಣ ಧರ್ಮವನ್ನು ತಿಳಿಯಬೇಕಾದರೆ ಪ್ರಯೋಗಾಲಯದಲ್ಲಿ ಪರೀಕ್ಷಿಸಲೇಬೇಕಾಗುತ್ತದೆ. ಸಂಸ್ಥೆಯು ಕೊರತೆ ಇರುವ ಪೋಷಕಾಂಶದ ಬಗ್ಗೆ ತಿಳಿಸಿ ಅಗತ್ಯ ಪೋಶಕಾಂಶವನ್ನು ಬಳಸಿ ಕೃಷಿ ಮಾಡಲು ನೆರವಾಗುತ್ತಿದೆ.



ಬರದ ನಾಡಲ್ಲಿ ತುಂಬಿರಲಿ ಕೆರೆಗಳು

# ಸಂಸ್ಥೆಯು ಕಳೆದ 2022-23ನೇ ಆರ್ಥಿಕ ವರ್ಷದಲ್ಲಿ ಪುನರುಜ್ಜೀವನಗೊಳಿಸಿದ ಕೆರೆಗಳ ವಿವರ

| ಅ.ನಂ. | ಗ್ರಾಮ | ಕೆರೆ ಹೆಸರು | ಪಂಚಾಯತ್ | ತಾಲೂಕ | ಜಿಲ್ಲೆ | ಎಕರೆ |
|---|---|---|---|---|---|---|
| 1 | ಹೋತನಳ್ಳಿ | ದಾಮಗಟ್ಟಿಕೆರೆ | ಹೋತನಳ್ಳಿ | ಶಿಗ್ಗಾವಿ | ಹಾವೇರಿ | 02.28.00 |
| 2 | ಹೋತನಳ್ಳಿ | ದಡಲಕಟ್ಟೆಕೆರೆ | ಹೋತನಳ್ಳಿ | ಶಿಗ್ಗಾವಿ | ಹಾವೇರಿ | 04.35.00 |
| 3 | ಕಲಗುಡ್ಡೆ | ವಡಗಟ್ಟಿಕೆರೆ | ಕಿರವಾಡಿ | ಹಾನಗಲ್ | ಹಾವೇರಿ | 22.13.00 |
| 4 | ಕಿರವಾಡಿ | ದೊಡ್ಡಕೆರೆ | ಕಿರವಾಡಿ | ಹಾನಗಲ್ | ಹಾವೇರಿ | 67.15.00 |
| 5 | ಕಮನವಳ್ಳಿ | ಇಚ್ಚಲಕಟ್ಟೆಕೆರೆ | ಎಣ್ಣೆಕೊಪ್ಪ | ಸೊರಬ | ಶಿವಮೊಗ್ಗ | 03.33.00 |
| 6 | ಬಿ.ಹುಲಿಕಟ್ಟಿ | ಉಪಾದ್ಯಾಯನಕೆರೆ | ಗುಡ್ಡದ ಹುಲಿಕಟ್ಟಿ | ಕಲಘಟಗಿ | ಧಾರವಾಡ | 02.14.00 |
| 7 | ಹೊಸೂರ | ಉದ್ದನಕಟ್ಟಿಕೆರೆ | ಹೊಸೂರ | ಶಿಗ್ಗಾವಿ | ಹಾವೇರಿ | 04.38.00 |
| 8 | ಗಳಗಿನಗಟ್ಟಿ | ಬಡಿಗಟ್ಟಿಕೆರೆ | ದೇವಿಕೊಪ್ಪ | ಕಲಘಟಗಿ | ಧಾರವಾಡ | 04.05.00 |
| 9 | ಕಂಪ್ಲಿಕೊಪ್ಪ | ಪೂಜಾರಕೆರೆ | ವರೂರ | ಹುಬ್ಬಳ್ಳಿ | ಧಾರವಾಡ | 03.08.00 |
| 10 | ತೊರುರ | ಅಗಸನಕಟ್ಟೆಕೆರೆ | ಹುನಗುಂದ | ಶಿಗ್ಗಾವಿ | ಹಾವೇರಿ | 03.15.00 |
| 11 | ಚೆನ್ನಗಿರಿ | ಪಳೆಯುಳಿಕೆಕಟ್ಟೆ ಕೆರೆ | ಅಂಡಗಿ | ಶಿರಸಿ | ಉತ್ತರಕನ್ನಡ | 03.12.00 |
| 12 | ದುಮ್ಮಿಹಾಳ | ಉಂಬಳಕಟ್ಟೆಕೆರೆ | ಘಾಳಪೂಜಿ | ಬ್ಯಾಡಗಿ | ಹಾವೇರಿ | 10.18.00 |
| 13 | ಘಾಳಪೂಜಿ | ಹಾರೋಗಟ್ಟಿಕೆರೆ | ಘಾಳಪೂಜಿ | ಬ್ಯಾಡಗಿ | ಹಾವೇರಿ | 08.06.00 |
| 14 | ಸಾಗರವಳ್ಳಿ | ಹುಣಸಿಕಟ್ಟಿಕೆರೆ | ಮಂತಗಿ | ಹಾನಗಲ್ | ಹಾವೇರಿ | 06.07.00 |
| 15 | ಹೀರೆಬಾಸೂರ | ದೇಸಾಯಿಕಟ್ಟಿಕೆರೆ | ಸೋಮಸಾಗರ | ಹಾನಗಲ್ | ಹಾವೇರಿ | 05.12.00 |
| 16 | ಗರುಡಹೊನ್ನಳ್ಳಿ | ತುಂಬಿಕೆರೆ | ಬಮ್ಮಿಗಟ್ಟಿ | ಕಲಘಟಗಿ | ಧಾರವಾಡ | 06.00.00 |
| 17 | ತಿರುಮಲಕೊಪ್ಪ | ಗೌಳಗಟ್ಟಿಕೆರೆ | ಅಗಡಿ | ಹುಬ್ಬಳ್ಳಿ | ಧಾರವಾಡ | 06.16.00 |
| 18 | ಅತ್ತಿಕಟ್ಟೆ | ಅಗಸರವಡ್ಡಿನಕೆರೆ | ಸೂಡಂಬಿ | ಬ್ಯಾಡಗಿ | ಹಾವೇರಿ | 09.27.00 |
| 19 | ಕೊಪ್ಪಗೊಂಡನಕೊಪ್ಪ | ಬೆಳವಲಕಟ್ಟೆಕೆರೆ | ತಿಳವಳ್ಳಿ | ಹಾನಗಲ್ | ಹಾವೇರಿ | 28.25.00 |
| 20 | ಅತ್ತಿಕಟ್ಟೆ | ತೋಟದಕೆರೆ | ಸೂಡಂಬಿ | ಬ್ಯಾಡಗಿ | ಹಾವೇರಿ | 21.06.00 |
| 21 | ನೆಲ್ಲಿಹರವಿ | ದೇಶಿಕೆರೆ | ಬಮ್ಮಿಗಟ್ಟಿ | ಕಲಘಟಗಿ | ಧಾರವಾಡ | 04.09.00 |
| 22 | ಹನುಮಾಪುರ | ಬ್ಯಾಡಗಟ್ಟಿಕೆರೆ | ಕಲ್ಲಾಪುರ | ಹಾನಗಲ್ | ಹಾವೇರಿ | 07.24.00 |
| 23 | ಸಾವಿಕೇರಿ | ಹೀರೆಕೆರೆ | ಸಮ್ಮಸಗಿ | ಹಾನಗಲ್ | ಹಾವೇರಿ | 23.05.00 |
| 24 | ದಿಂಬುವಳ್ಳಿ | ಊರಮುಂದಿನಕೆರೆ | ಸೂಳಿಕಟ್ಟಿ | ಕಲಘಟಗಿ | ಧಾರವಾಡ | 10.31.00 |
| 25 | ಗುಂಡಶೆಟ್ಟಿಕೊಪ್ಪ | ಊರಮುಂದಿನಕೆರೆ | ಮುಟಗುಪ್ಪೆ | ಸೊರಬ | ಶಿವಮೊಗ್ಗ | 04.34.00 |
| 26 | ಬಿದರಗೇರಿ | ಊರಮುಂದಿನದೊಡ್ಡಕೆರೆ | ಉದ್ರಿ | ಸೊರಬ | ಶಿವಮೊಗ್ಗ | 19.32.00 |
| 27 | ಹೊಸೂರ | ಭರಮಕಟ್ಟಿಕೆರೆ | ಹೊಸುರ | ಶಿಗ್ಗಾವಿ | ಹಾವೇರಿ | 04.28.00 |
| 28 | ಬೆಂಡಲಗಟ್ಟಿ | ಐಯತಪ್ಪನಕೆರೆ | ಬೀರವಳ್ಳಿ | ಕಲಘಟಗಿ | ಧಾರವಾಡ | 07.02.00 |
| 29 | ಚಿಕ್ಕಳ್ಳಿ | ಹೀರೆಕೆರೆ | ಚಿಕ್ಕಬಾಸೂರ | ಬ್ಯಾಡಗಿ | ಹಾವೇರಿ | 23.39.00 |
| 30 | ತಿಮ್ಮಾಪುರ | ಒಡ್ಡಿನಕೆರೆ | ಸೂಡಂಬಿ | ಬ್ಯಾಡಗಿ | ಹಾವೇರಿ | 06.18.00 |
| 31 | ಹುನಗುಂದ | ಹೊಲಗಟ್ಟಿಕೆರೆ | ಹುನಗುಂದ | ಶಿಗ್ಗಾವಿ | ಹಾವೇರಿ | 04.18.00 |
| 32 | ತೀರ್ಥ | ಪವಾಡಕೆರೆ | ಮಳಲಿ | ಕುಂದಗೋಳ | ಧಾರವಾಡ | 10.09.00 |
| 33 | ಕುಂಕೂರು | ಹೀರೆಕೆರೆ | ಮಳಲಿ | ಕುಂದಗೋಳ | ಧಾರವಾಡ | 09.20.00 |
| 34 | ಕಾಯಗುಡ್ಡೆ | ವಡ್ಡಿನಗದ್ದೆಕೆರೆ | ಬಂಕನಾಳ | ಶಿರಸಿ | ಉತ್ತರಕನ್ನಡ | 04.11.00 |
| 35 | ಚಂದ್ರಗುತ್ತಿ | ಹೊಸಮಠದಕೆರೆ | ಚಂದ್ರಗುತ್ತಿ | ಸೊರಬ | ಶಿವಮೊಗ್ಗ | 12.00.00 |
| 36 | ಹೊಸಬಾಳೆ | ತೋಟದಮೇಲಿನಕೆರೆ | ಜೆನ್ನೂರು | ಸೊರಬ | ಶಿವಮೊಗ್ಗ | 08.15.00 |
| 37 | ಮಲಕನಕೊಪ್ಪ | ಹೀರೆಕೆರೆ | ಜಿನ್ನೂರು | ಕಲಘಟಗಿ | ಧಾರವಾಡ | 05.04.00 |
| 38 | ಅಜಗುಂಡಿಕೊಪ್ಪ | ಗೋವಿನಕಟ್ಟೆಕೆರೆ | ಶಿರಗೋಡ | ಹಾನಗಲ್ | ಹಾವೇರಿ | 09.17.00 |
| 39 | ಕೋಣನಕೊಪ್ಪ | ಅಪ್ಪಿನಕಟ್ಟಿಕೆರೆ | ಚಿಕ್ಕಾಂಶಿ ಹೊಸೂರು | ಹಾನಗಲ್ | ಹಾವೇರಿ | 03.11.00 |
| 40 | ಬಾಚಣಕಿ | ಅಂಗಡಿಯವರಕೆರೆ | ಬಾಚಣಕಿ | ಮುಂಡಗೋಡ | ಉತ್ತರಕನ್ನಡ | 10.33.00 |
| 41 | ಹುನಗುಂದ | ಜಿಗಳಿಕೆರೆ | ಹುನಗುಂದ | ಮುಂಡಗೋಡ | ಉತ್ತರಕನ್ನಡ | 06.35.00 |
| 42 | ಅರಿಶಿನಗುಪ್ಪಿ | ಹೀರೆಕೆರೆ | ಶ್ಯಾಡಗುಪ್ಪಿ | ಹಾನಗಲ್ | ಹಾವೇರಿ | 20.27.00 |
| 43 | ಶ್ಯಾಡಗುಪ್ಪಿ | ಹೊಸಗಟ್ಟಿಕೆರೆ | ಶ್ಯಾಡಗುಪ್ಪಿ | ಹಾನಗಲ್ | ಹಾವೇರಿ | 04.10.00 |
| 44 | ಹರಳಕೊಪ್ಪ | ಊರಮುಂದಿನಕೆರೆ | ಸಮ್ಮಸಗಿ | ಹಾನಗಲ್ | ಹಾವೇರಿ | 18.07.00 |






# ಮನುವಿಕಾಸ ಸಂಸ್ಥೆಯ ವತಿಯಿಂದ ಅಂಕೋಲಾದಲ್ಲಿ ಮಹಿಳಾ ಸಮಾವೇಶ ಆಯೋಜನೆ

ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಈಡಲ್‌ಗೀವ್ ಹಾಗೂ ದಲ್ಯಾನ್ ಫೌಂಡೇಶನ್ ಸಹಯೋಗದೊಂದಿಗೆ ದಿನಾಂಕ 10–02–2023ರಂದು ಅಂಕೋಲಾದ ಹಾಲಕ್ಕಿ ಒಕ್ಕಲಿಗರ ಸಮುದಾಯ ಭವನದಲ್ಲಿ ಸ್ವ ಸಹಾಯ ಸಂಘದ ಮಹಿಳೆಯರಿಗಾಗಿ ಮಹಿಳಾ ಸಮಾವೇಶವನ್ನು ಆಯೋಜಿಸಿತ್ತು.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟರವರು ಸಮಾವೇಶವನ್ನು ಉದ್ದೇಶಿಸಿ ಪ್ರಾಸ್ತಾವಿಕ ಮಾತನಾಡಿ, ತಮ್ಮ ಶಿಕ್ಷಕರು, ಹಿರಿಯರು, ಹಾಗೂ ಸಮಾನ ವಯಸ್ಕರ ಸಹಾಯದಿಂದ ಸಂಸ್ಥೆಯು ಇಲ್ಲಿಯವರೆಗೆ ನಡೆದು ಬಂದ ಹಾದಿಯನ್ನು ಎಳೆ ಎಳೆಯಾಗಿ ವಿವರಿಸಿದರು. ಶಿಕ್ಷಣದಿಂದ ವಂಚಿತರಾದವರು, ಮಹಿಳೆಯರು, ರೈತರು, ಪರಿಸರ ಸಂರಕ್ಷಣೆ, ಕೆರೆಗಳ ಪುನರುಜ್ಜೀವನ ಹಾಗೂ ಮಾನವೀಯ ಮೌಲ್ಯಗಳ ರಕ್ಷಣೆಯಲ್ಲಿ ಕೆಲಸ ನಿರ್ವಹಿಸುತ್ತಾ ಬಂದಿದ್ದು, 2500 ಕ್ಕೂ ಹೆಚ್ಚು ಸ್ವ ಸಹಾಯ ಸಂಘಗಳ ರಚನೆ, 3500ಕ್ಕೂ ಹೆಚ್ಚು ಕೃಷಿ ಹೊಂಡ, 200 ಕ್ಕೂ ಹೆಚ್ಚು ದೊಡ್ಡ ಕೆರೆ, 40000ಕ್ಕೂ ಹೆಚ್ಚು ಕುಟುಂಬಗಳಿಗೆ ಸಂಸ್ಥೆಯ ಯೋಜನೆಗಳಿಂದ ನೇರಪ್ರಯೋಜನ ಆಗಿದ್ದು 5 ಜಿಲ್ಲೆಗಳಲ್ಲಿ ಕಾರ್ಯೋನ್ಮುಖವಾಗಿದೆ. ಕರಾವಳಿ ತೀರದ ಮಹಿಳೆಯರು ದೊಡ್ಡ ಬೋಟ್ ಮಾಲೀಕರಿಂದ ಮೀನು ಖರೀದಿಸಿ ಬುಟ್ಟಿಯಲ್ಲಿ ಹೊತ್ತು ಮಾರಾಟ ಮಾಡುತ್ತಾ ಬಂದಿದ್ದಾರೆ. ಈ ಮಹಿಳಾ ಮೀನುಗಾರರಿಗೆ ಮಾರುಕಟ್ಟೆ ಒದಗಿಸಿ ಜೀವನದಲ್ಲಿ ಒಂದು ಹೊಸ ಬದಲಾವಣೆ ತರಲು ಕಾರವಾರದಲ್ಲಿ ಉತ್ತರ ಕನ್ನಡ ಜಿಲ್ಲಾ ಮಹಿಳಾ ಮೀನು ಮಾರಾಟಗಾರರ ಮತ್ತು ಉತ್ಪಾದಕರ ಸಂಘವನ್ನು ಸ್ಥಾಪಿಸಿದ್ದೇವೆ. ಇದರೊಂದಿಗೆ ಗೋಕರ್ಣ ತರಕಾರಿ ಬೆಳೆಗಾರರಿಗೆ ಕೃಷಿಯಲ್ಲಿ ಆಧುನಿಕತೆಯನ್ನು ಅಳವಡಿಸಲು ಗೊಬ್ಬರ, ಮತ್ತು ಯಂತ್ರೋಪಕರಣವನ್ನು ಒದಗಿಸುವ ಸಲುವಾಗಿ ಗೋಕರ್ಣ ತರಕಾರಿ ಬೆಳೆಗಾರರ ರೈತ ಉತ್ಪಾದಕರ ಸಂಘವನ್ನು ಸಹ ಸ್ಥಾಪಿಸಿದ್ದೇವೆ. ಮಹಿಳೆಯರು ಭೂಮಿ ತೂಕದ ತಾಳ್ಮೆ, ಶಿಸ್ತು, ಸಂಘಟನಾ ಶಕ್ತಿ ಹಾಗೂ ಸಾಮರ್ಥ್ಯ ಹೊಂದಿದವರಾಗಿದ್ದು ಅವರಲ್ಲಿರುವ ಉದ್ಯಮಶೀಲ ಗುಣವನ್ನು ಪ್ರೋತ್ಸಾಹಿಸಿದರೆ ಮಹಿಳಾ ಸಬಲೀಕರಣದೊಂದಿಗೆ ಸಮಾಜದ ಸಬಲೀಕರಣವು ಸಾಧ್ಯ ಎಂದರು.

ಕಾರ್ಯಕ್ರಮವನ್ನು ಕಾರವಾರ–ಅಂಕೋಲಾ ಕ್ಷೇತ್ರದ ಶಾಸಕಿಯಾದ ಶ್ರೀಮತಿ ರೂಪಾಲಿ ನಾಯ್ಕ್, ದೀಪ ಬೆಳಗುವುದರ ಮೂಲಕ ಉದ್ಘಾಟಿಸಿ ಮಾತನಾಡಿ, ಮನುವಿಕಾಸ ಸಂಸ್ಥೆಯು ನನ್ನ ಕ್ಷೇತ್ರದ ಮಹಿಳೆಯರಿಗೆ ಅನೇಕ ರೀತಿಯ ಕೌಶಲ್ಯ ತರಬೇತಿಯನ್ನು ನೀಡಿ ಮಹಿಳಾ ಸಬಲೀಕರಣಕ್ಕೆ ಉತ್ತೇಜನ ನೀಡಿದೆ. ನಾವು ನಮ್ಮ ಜೀವನವನ್ನು ರೂಪಿಸಿಕೊಳ್ಳಲು ಕಷ್ಟವನ್ನು ಮುಷ್ಟಿಯಲ್ಲಿಟ್ಟುಕೊಂಡು ದುಡಿಯಬೇಕು. ಆಹಾರ ಉತ್ಪನ್ನಗಳಾದ ಚಿಕ್ಕಿ, ಹಪ್ಪಳ ಇವುಗಳನ್ನು ಮಾಡಿದರೆ ಮನೆಗೆ ಬಂದು ಖರೀದಿಸಿ ಮಾರುಕಟ್ಟೆಯನ್ನು ಒದಗಿಸಿಕೊಡುವುದರೊಂದಿಗೆ, ಮಹಿಳಾ ಮೀನುಗಾರರಿಗೆ ಮೀನು ಮಾರುಕಟ್ಟೆಯನ್ನು ಮಾಡಿಕೊಡುತ್ತೇವೆ. ಹಾಲಕ್ಕಿ ಸಮುದಾಯದ ಮಹಿಳೆಯರಿಗೆ ಮಾವು ಮತ್ತು ಕಲ್ಲಂಗಡಿ ಮಾರಾಟ ಮಾಡಲು ಶೆಡ್ ನಿರ್ಮಾಣ ಮಾಡಿ ಮನುವಿಕಾಸ ಸಂಸ್ಥೆಗೆ ಸದಾ ಪ್ರೋತ್ಸಾಹ ನೀಡುತ್ತೇವೆ ಎಂದು ಭರವಸೆ ನೀಡಿದರು.

ಅಂಕೋಲಾ ತಾಲೂಕಾ ಪಂಚಾಯತ್ ಮಾಜಿ ಅಧ್ಯಕ್ಷರಾದ ಸುಜಾತಾ ಗಾಂವಕರ ಮಾತನಾಡಿ, ಮನುವಿಕಾಸ ಸಂಸ್ಥೆಯು ಬದಲಾವಣೆಗಾಗಿ ಮಹಿಳಾ ಸಮಾವೇಶವನ್ನು ಮಾಡಿ ಮಹಿಳೆಯರಿಗೆ ಉತ್ತಮ ಮಾರ್ಗದರ್ಶನ ನೀಡುತ್ತಿದೆ. ಹಲವಾರು ರೀತಿಯ ತರಬೇತಿಗಳನ್ನು ನೀಡಿ ಮಹಿಳೆಯರಿಗೆ ಭದ್ರ ಬುನಾದಿ ಹಾಕಲು ಶ್ರಮಿಸುತ್ತಿದ್ದಾರೆ. ಸ್ವ ಸಹಾಯ ಸಂಘದ ಮಹಿಳೆಯರು ಮನುವಿಕಾಸದ ರೂವಾರಿಗಳು. ಇದಲ್ಲದೆ ಕೆರೆ ಹೂಳೆತ್ತುವುದು, ಕೃಷಿ ಹೊಂಡ ರಚನೆ ಮತ್ತು ಸಾಲ ಸೌಲಭ್ಯ ನೀಡಿರುವುದು ನಿರ್ದೇಶಕ ಶ್ರೀ ಗಣಪತಿ ಭಟ್ಟ ಇವರ ಸಾಧನೆ ಎಂದೇ ಪರಿಗಣಿಸಬಹುದು. ಮಹಿಳೆಯರಿಗೆ ಎಲ್ಲವನ್ನೂ ನಿರ್ವಹಿಸುವ ಸಾಮರ್ಥ್ಯ ಇದ್ದು ಉಳಿತಾಯ ಮಾಡುವ ಮನಸ್ಥಿತಿಯನ್ನು ಹೊಂದಬೇಕು ಎಂದರು.

ತಾಲೂಕಾ ವೈದ್ಯಾಧಿಕಾರಿಗಳಾದ ಕುಮಾರಿ ಅನುಪಮಾ ನಾಯ್ಕ್ ಅವರು ಮಾತನಾಡಿ ಮಹಿಳೆಯರಿಗಾಗುವ ಋತುಚಕ್ರದ ಸಮಸ್ಯೆ, ಕಾಲ ಕಾಲಕ್ಕೆ ಗರ್ಭಿಣಿಯರ ಆರೋಗ್ಯ ತಪಾಸಣೆ, ರಕ್ತದೊತ್ತಡ, ಮಧುಮೇಹ ಇವುಗಳ ಬಗ್ಗೆ ಲಕ್ಷ್ಯ ಇರಲಿ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಪುರಸಭೆ ಅಧ್ಯಕ್ಷರಾದ ಶ್ರೀಮತಿ ಶಾಂತಲಾ ನಾಡಕರ್ಣಿ ಇವರು ಮಾತನಾಡಿ, ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯವರು ನಿಸ್ವಾರ್ಥವಾಗಿ ತಮ್ಮ ಕೆಲಸ ಮಾಡುತ್ತಾ ಬಂದಿದ್ದಾರೆ. ಸಮಯದ ಬಿಡುವು ಮಾಡಿಕೊಂಡು ಮಹಿಳೆಯರು ಉದ್ಯಮಶೀಲ ಗುಣ ಬೆಳೆಸಿಕೊಂಡು ಕಾರ್ಯಪ್ರವೃತ್ತರಾಗಬೇಕು ಎಂದು ಮಾರ್ಗದರ್ಶನ ನೀಡಿದರು. ಮನುವಿಕಾಸ ಸಂಸ್ಥೆಯ ಅಂಕೋಲಾ ಭಾಗದ ಸಿಬ್ಬಂದಿಯಾದ ಶ್ರೀ ಮಹೇಶ್ ನಾಯ್ಕ್ ಇವರು ವಂದಿಸಿದರು. ಕಾರ್ಯಕ್ರಮದಲ್ಲಿ ಅಂಕೋಲಾ ತಾಲೂಕಿನ ತಾಲೂಕಾ ದಂಡಾಧಿಕಾರಿಗಳಾದ ಶ್ರೀ ಸತೀಶ ಟಿ ಗೌಡ, ಮೀನುಗಾರಿಕಾ ಸಹಾಯಕ ನಿರ್ದೇಶಕರಾದ ಶ್ರೀಮತಿ ರೆನಿಟಾ ಡಿಸೋಜಾ, ವಕೀಲರಾದ ಶ್ರೀಮತಿ ಪ್ರತಿಭಾ, ಅಂಕೋಲಾ ಲಯನ್ಸ್ ಕ್ಲಬ್ ಅಧ್ಯಕ್ಷರಾದ ಶ್ರೀಮತಿ ಜಯಶ್ರೀ ಶೆಟ್ಟಿ, ನಾಟಿ ವೈದ್ಯರಾದ ಡಾ। ಹನುಮಂತ ಗೌಡರು ಹಾಗೂ ಸ್ವ ಸಹಾಯ ಸಂಘ ಮಹಿಳೆಯರು ಉಪಸ್ಥಿತರಿದ್ದರು.

# ಮನುವಿಕಾಸಕ್ಕೆ ಎರಡು ದಶಕದ ಸಂಭ್ರಮ ಕರ್ಜಗಿಯಲ್ಲಿ ಸಮನ್ವಯ ಕಾರ್ಯಕ್ರಮ ಆಯೋಜನೆ











ಮನುವಿಕಾಸ ಸಂಸ್ಥೆ ಹಾಗೂ ಈಡೇಲ್‌ಗೀವ್ ಫೌಂಡೇಶನ್ ಮತ್ತು ದಲ್ಯಾನ್ ಫೌಂಡೇಶನ್ ಸಹಯೋಗದಲ್ಲಿ ದಿನಾಂಕ 12/2/2023 ರಂದು ಮನುವಿಕಾಸ ಸಂಸ್ಥೆಯ ಹುಟ್ಟೂರಾದ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಕರ್ಜಗಿ ಗ್ರಾಮದಲ್ಲಿ ಮಹಿಳಾ ಸಮಾವೇಶವನ್ನು ಆಯೋಜಿಸಲಾಗಿತ್ತು.

ಕರ್ನಾಟಕ ವಿಧಾನಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಮನುವಿಕಾಸ ಸಂಸ್ಥೆಯು ತನ್ನ ಸಮಾಜ ಸೇವೆಯ ಮುಖೇನವಾಗಿ ರಾಜ್ಯಕ್ಕೆ ಮಾದರಿ ಸ್ವಯಂ ಸೇವಾ ಸಂಸ್ಥೆಯಾಗಿ ಗುರುತಿಸಿಕೊಂಡಿದೆ. ಕೆರೆಗಳ ಹೂಳೆತ್ತುವುದರ ಮೂಲಕ ರೈತಾಪಿ ವರ್ಗದವರಿಗೆ ಅನುಕೂಲ ಮಾಡಿಕೊಟ್ಟಿದೆ. ಮಹಿಳಾ ಸ್ವ-ಸಹಾಯ ಸಂಘಗಳನ್ನು ರಚಿಸಿ ವಿವಿಧ ಕೌಶಲ್ಯ ತರಬೇತಿಗಳನ್ನು ನೀಡಿ ಮಹಿಳೆಯರನ್ನು ಸ್ವ ಉದ್ಯೋಗಿಗಳಾಗುವಂತೆ ಮಾಡುವಲ್ಲಿ ಮನುವಿಕಾಸ ಸಂಸ್ಥೆಯ ಕಾರ್ಯ ಪ್ರಶಂಸಿಸುವಂತದ್ದು. ಸಂಸ್ಥೆಯು ಸಾಮಾಜಿಕ ಕ್ಷೇತ್ರದಲ್ಲಿ ಸಮಾಜಕ್ಕೆ ಸಾಕಷ್ಟು ಕೊಡುಗೆಗಳನ್ನು ನೀಡಿದೆ. ಸಸಿಯಾಗಿ ಬೆಳೆಯುತ್ತಿರುವ ಸಂಸ್ಥೆಯು ಮುಂದೆ ದೊಡ್ಡ ಹೆಮ್ಮರವಾಗಿ ಬೆಳೆದು ನಿಲ್ಲಲಿ ಎಂದು ಶುಭ ಹಾರೈಸಿದರು.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟರವರು ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕ ಮಾತನಾಡಿ ಮನುವಿಕಾಸ ಸಂಸ್ಥೆಯ ಪ್ರಯಾಣ 2003ರಲ್ಲಿ ಸಮಾನ ಮನಸ್ಕರ ಗುಂಪಿನಿಂದ ಕರ್ಜಗಿ ಎಂಬ ಈ ಪುಟ್ಟ ಹಳ್ಳಿಯಿಂದ ಆರಂಭವಾಯಿತು. ಪರಿಸರ, ಶಿಕ್ಷಣ, ಮಹಿಳಾ ಸಬಲೀಕರಣ ಮುಖ್ಯ ಉದ್ದೇಶವಾಗಿ ಇರಿಸಿಕೊಂಡು ಕಾರ್ಯ ನಿರ್ವಹಿಸಲು ಆರಂಭಿಸಿ ಉತ್ತರ ಕನ್ನಡ, ಶಿವಮೊಗ್ಗ, ಹಾವೇರಿ, ಧಾರವಾಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ನಮ್ಮ ಸಂಸ್ಥೆಯು ಯೋಜನೆಗಳನ್ನು ಅನುಷ್ಠಾನಗೊಳಿಸಲು ಶ್ರಮಿಸುತ್ತಿದ್ದೇವೆ. ಸಮಾಜಮುಖಿಯಾಗಿ ಕಾರ್ಯನಿರ್ವಹಿಸುವಾಗ ಸಾಕಷ್ಟು ಅಡೆತಡೆಗಳು ಬಂದರೂ ಸಹ ಅದನ್ನು ಮೀರಿ ನಮ್ಮ ಗುರಿ ತಲುಪುವಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇವೆ ಎಂದರು. ಸಂಸ್ಥೆಯು ಕೆರೆಗಳ ಹೂಳೆತ್ತಿ ಅಂತರ್ಜಲ ಮಟ್ಟವನ್ನು ಹೆಚ್ಚಿಸಿದೆ, ಇದರಿಂದ ಕೃಷಿಕರಿಗೆ ಸಾಕಷ್ಟು ಅನುಕೂಲವಾಗಿದೆ. ಮಹಿಳಾ ಸ್ವ-ಸಹಾಯ ಸಂಘಗಳನ್ನು ರಚಿಸಿ ಹೊಲಿಗೆ ತರಬೇತಿ, ಡ್ರೈವಿಂಗ್ ತರಬೇತಿ, ಸುಸ್ಥಿರಕೃಷಿ ತರಬೇತಿ, ಬ್ಯೂಟಿಶಿಯನ್ ತರಬೇತಿ, ಕೇಟರಿಂಗ್ ತರಬೇತಿಗಳನ್ನು ನೀಡಿ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ಸಂಸ್ಥೆಯ ಯೋಜನೆಯು ಅನುಕೂಲವಾಗಿದೆ. ಕೂಲಿ ಕಾರ್ಮಿಕರಲ್ಲಿ ನರೇಗಾ(ಉದ್ಯೋಗ ಖಾತ್ರಿ) ಕುರಿತಾದ ಜಾಗೃತಿ ಮೂಡಿಸಿ ಕೆಲಸವನ್ನು ಕೊಡಿಸುತ್ತಿದ್ದೇವೆ ಎಂದರು. ನಾವು ಸೂರ್ಯನಾಗಲು ಸಾಧ್ಯವಾಗದಿದ್ದರೂ ಸಹ ಚಿಕ್ಕ ಹಣತೆಯ ಬೆಳಕಾಗಿ ಕತ್ತಲನ್ನು ದೂರವಾಗಿಸಬಹುದು ಎಂದು ಹೇಳಿದರು.

ಅತಿಥಿಗಳಾಗಿ ಆಗಮಿಸಿದ್ದ ಸಾಮಾಜಿಕ ಕಾರ್ಯಕರ್ತರಾದ ಶ್ರೀ ಉಪೇಂದ್ರ ಪೈ ಮಾತನಾಡಿ, ಮನುವಿಕಾಸ ಸಂಸ್ಥೆಯು ಜನರಿಗೆ ಏನು ಅವಶ್ಯಕತೆಯಿದೆ ಎಂದು ತಿಳಿದು ಅದರಂತೆ ಕಾರ್ಯಚಟುವಟಿಕೆಗಳನ್ನು ಮಾಡುತ್ತಾ ಬಂದಿದ್ದು ಯಶಸ್ವಿಯಾಗಿ ಸಾಗುತ್ತಿದೆ. ಕೋವಿಡ್ ಸಂದರ್ಭದಲ್ಲಿ ಜನರಿಗೆ ಆಹಾರದ ಕಿಟ್‌ಗಳನ್ನು, ಕೋರೊನಾ ಲಸಿಕೆ ಹಾಕಿಸಲು ಆರೋಗ್ಯ ಸಿಬ್ಬಂದಿಗಳಿಗೆ ಅನುಕೂಲವಾಗಲು ಉಚಿತ ವಾಹನ ವ್ಯವಸ್ಥೆಯನ್ನು ಕಲ್ಪಿಸಿ ಜನರಿಗೆ ಪರೋಪಕಾರಿಯಾಗಿ ಕೆಲಸ ನಿರ್ವಹಿಸಿದೆ. ಸಂಸ್ಥೆಯು ಇನ್ನೂ ಉತ್ತಮವಾಗಿ ಬೆಳೆಯಲಿ ಎಂದು ಶುಭ ಹಾರೈಸಿದರು.

ಅತಿಥಿಗಳಾಗಿ ಆಗಮಿಸಿದ್ದ ಪ್ರಗತಿಪರ ಕೃಷಿಕರು ಹಾಗೂ ಸಾಮಾಜಿಕ ಧುರೀಣರು ಆದ ಶ್ರೀ ವೆಂಕಟೇಶ ಹೆಗಡೆ ಹೊಸಬಾಳೆ ಮಾತನಾಡಿ ತಳಮಟ್ಟದ ಸಮುದಾಯದವರ ಏಳಿಗೆಗಾಗಿ ಮನುವಿಕಾಸ ಸಂಸ್ಥೆ ಶ್ರಮಿಸುತ್ತಿದೆ. ಸಿದ್ದಿ ಸಮುದಾಯ ಹಾಗೂ ಮಹಿಳಾ ಮೀನು ಮಾರಾಟಗಾರರಿಗೆ ವಿಶೇಷ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಿ ಮಾದರಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದರು. ಸ್ವಂತ ಉದ್ಯೋಗದ ಮೂಲಕ ಗುರುತಿಸಿಕೊಂಡ ವಿವಿಧ ವಲಯದ ಮಹಿಳೆಯರಿಗೆ ಮನುವಿಕಾಸ ಸಂಸ್ಥೆಯ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಪ್ರಾಂಶುಪಾಲರಾದ ಶ್ರೀ ಕೆ. ಎನ್. ಹೊಸ್ಮನಿಯವರು ಮಾತನಾಡಿ ಮನುವಿಕಾಸದಿಂದ ಮನುಷ್ಯನ ವಿಕಾಸ ಖಂಡಿತವಾಗಿಯು ಆಗುತ್ತಿದೆ. ಸ್ವ ಸಹಾಯ ಸಂಘದಲ್ಲಿ ತೊಡಗಿರುವ ಅದೆಷ್ಟೋ ಮಹಿಳೆಯರು ಸಂಸ್ಥೆಯಿಂದ ವಿವಿಧ ತರಬೇತಿಗಳನ್ನು ಪಡೆದು ಸ್ವ ಉದ್ಯೋಗಿಗಳಾಗಿ ಇತರರಿಗೂ ಮಾದರಿಯಾಗಿದ್ದಾರೆ ಎಂದರು. ಸಂಸ್ಥೆಯು ಇನ್ನೂ ಹೆಚ್ಚಿನ ಸಾಧನೆ ಮಾಡಲಿ ಎಂದು ಆಶಿಸಿದರು.

ಈ ಕಾರ್ಯಕ್ರಮದಲ್ಲಿ ನ್ಯಾಯವಾದಿಗಳಾದ ಸದಾನಂದ ಭಟ್ಟ, ಪತ್ರಕರ್ತ ಪ್ರವೀಣ್ ಹೆಗಡೆ, ಲೆಕ್ಕ ಪರಿಶೋಧಕಾರದ ಎಂ.ಎಸ್.ಶೆಟ್ಟಿ, ಮನುವಿಕಾಸ ಸಂಸ್ಥೆ ಸಂಸ್ಥಾಪಕರಾದ ಹರಿಶ್ಚಂದ್ರ ಭಟ್ಟ, ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ನಾಗರಾಜ್ ಹೆಗಡೆ ಮೊದಲಾದ ಗಣ್ಯರು ಹಾಗೂ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು, ಸುಮಾರು 700ಕ್ಕೂ ಅಧಿಕ ಸಾರ್ವಜನಿಕರು ಉಪಸ್ಥಿತರಿದ್ದರು.

# ಮನುವಿಕಾಸದ ಕಾಳಜಿ, ಕೃಷಿ ಹೊಂಡಗಳ ನಿರ್ಮಾಣದಿಂದ ರೈತರ ಶ್ರೇಯೋಭಿವೃದ್ಧಿ

"ಕೃಷಿತೋ ನಾಸ್ತಿ ದುರ್ಭಿಕ್ಷಂ ಜಪತೋ ನಾಸ್ತಿ ಪಾತಕಂ"

ಕೃಷಿ ಮಾಡುವವರಿಗೆ ಬರಗಾಲವಿಲ್ಲ ಜಪವನ್ನು ಮಾಡುವವರಿಗೆ ಪಾಪವಿಲ್ಲ ಎಂಬ ಮಾತಿದೆ. ಭಾರತ ಕೃಷಿಯಾಧಾರಿತ ದೇಶ. ರೈತ ದೇಶದ ಬೆನ್ನೆಲುಬು. ಫಲವತ್ತಾದ ಭೂಮಿಯೊಂದಿದ್ದರೆ ಮಾತ್ರ ಸಾಲದು, ಉತ್ತಮ ಬೇಸಾಯದ ಬದುಕನ್ನು ಕಟ್ಟಿಕೊಳ್ಳಲು ಜಲ ಸಂಪನ್ಮೂಲ ಸಹ ಅಷ್ಟೇ ಮುಖ್ಯವಾದದ್ದು. ಒಳ್ಳೆಯ ನೀರಿನ ಆಕರಗಳು ಬೇಕೇ ಬೇಕು.

ಸಾವಿರಾರು ಅಡಿಗಳವರೆಗೆ ಕೊಳವೆ ಬಾವಿ (ಬೋರ್‌ವೆಲ್) ಕೊರೆದರೂ ಕೂಡ ನೀರಿನ ಸೆಲೆ ಸಿಗುತ್ತಿಲ್ಲ. ಕುಡಿಯುವ ನೀರಿಗೆ ಹಾಹಾಕಾರವನ್ನು ನಮ್ಮ ರಾಜ್ಯದ ನೂರಾರು ಹಳ್ಳಿಗಳಲ್ಲಿ ಕಾಣಬಹುದು. ಭೂಮಿ ಬರಡಾಗುತ್ತಿದೆಯಾ? ಅಂತರ್ಜಲ ಬತ್ತುತ್ತಿದೆಯಾ? ಏನಿದಕ್ಕೆ ಪರಿಹಾರ?

### ಕೃಷಿ ಹೊಂಡಗಳ ನಿರ್ಮಾಣ ಇದಕ್ಕೊಂದು ಸರಳ ಪರಿಹಾರ

ಹೌದು, ಕೃಷಿ ಹೊಂಡಗಳನ್ನು ನಿರ್ಮಿಸುವುದರಿಂದ ಹೆಚ್ಚಿನ ನೀರಿನ ಸಂಗ್ರಹಣೆಯೊಂದಿಗೆ, ಅಂತರ್ಜಲ ಮಟ್ಟವನ್ನೂ ಸಹ ವೃದ್ಧಿಸಬಹುದಾಗಿದೆ. ಕಡಿಮೆ ವೆಚ್ಚದಲ್ಲಿ ಅಧಿಕ ನೀರಿನ ಸದುಪಯೋಗವನ್ನು ಪಡೆದುಕೊಳ್ಳಬಹುದು.

ಮನುವಿಕಾಸ ಸಂಸ್ಥೆಯು ರೈತಾಪಿ ವರ್ಗದವರಿಗೆ ಕೃಷಿ ಚಟುವಟಿಕೆಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಸಣ್ಣ ಹಿಡುವಳಿ ರೈತರಿಗೆ ಉಚಿತವಾಗಿ ಹಾಗೂ ಮಧ್ಯಮ ವರ್ಗದ ರೈತರಿಗೆ ಕಡಿಮೆ ದರದಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಿ ಕೊಡುತ್ತಿದೆ.

ಶಿರಸಿ, ಸಿದ್ದಾಪುರ, ಯಲ್ಲಾಪುರ, ಸೊರಬ ತಾಲೂಕುಗಳಲ್ಲಿ 3813 ಕೃಷಿಹೊಂಡಗಳನ್ನ ನಿರ್ಮಿಸಿ ರೈತರ ಕೃಷಿ ಜಮೀನಿಗೆ ನೀರುಣಿಸಲು ಸಹಕಾರಿಯಾಗಿದೆ. ಪ್ರತಿ ವರ್ಷ ಸಾವಿರಾರು ರೂಪಾಯಿ ಹಣವನ್ನು ಖರ್ಚು ಮಾಡಿ ಬೋರ್ ವೆಲ್ ಕೊರೆಸಿ ಸಾಕಷ್ಟು ರೈತರು ಕೈ ಸುಟ್ಟುಕೊಳ್ಳುತ್ತಿದ್ದರು, ಮನುವಿಕಾಸ ಸಂಸ್ಥೆಯ ವತಿಯಿಂದ ಕಡಿಮೆ ವೆಚ್ಚದಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಿಕೊಟ್ಟಿದ್ದರಿಂದ ಅಂತರ್ಜಲ ಮಟ್ಟವು ಹೆಚ್ಚುತ್ತಿದೆ, ಜೊತೆಯಲ್ಲಿ ಬೊರವೆಲ್‌ಗಳಿಗೆ ಹೊಸ ಜೀವ ಕಳೆ ತುಂಬಿ ರೈತರು ನೆಮ್ಮದಿಯ ಕೃಷಿ ಬದುಕನ್ನು ಕಟ್ಟಿಕೊಂಡಿದ್ದಾರೆ. ಮಳೆಯನ್ನು ನಂಬಿ ವರ್ಷಕ್ಕೆ ಒಂದೇ ಬೆಳೆಯನ್ನು ಬೆಳೆಯುತ್ತಿದ್ದ ರೈತರು ಮನುವಿಕಾಸ ನಿರ್ಮಿಸಿಕೊಟ್ಟ ಕೃಷಿ ಹೊಂಡಗಳಿಂದ ಉತ್ತಮ ನೀರಿನ ಲಭ್ಯತೆಯಿಂದ ಬೇಸಿಗೆಯಲ್ಲಿ ತರಕಾರಿ, ಏಕದಳ – ದ್ವಿದಳ ಧಾನ್ಯಗಳನ್ನು ಬೆಳೆಯುತ್ತಿದ್ದಾರೆ.

### ಕೃಷಿ ಹೊಂಡಗಳ ನಿರ್ಮಾಣದಿಂದ ಅನುಕೂಲವಿದೆಯಾ ?

ಕೃಷಿ ಹೊಂಡಗಳ ನಿರ್ಮಾಣದಿಂದ ಖಂಡಿತ ಅನುಕೂಲವಿದೆ. ಮನುವಿಕಾಸ ಸಂಸ್ಥೆಯು ಕಡಿಮೆ ದರದಲ್ಲಿ ಕೃಷಿ ಹೊಂಡವನ್ನು ನಿರ್ಮಿಸಿಕೊಡುತ್ತಿದೆ. ಇದರಿಂದ ರೈತರಿಗೆ ಖರ್ಚು ಕಡಿಮೆಯಾದಂತಾಗಿದೆ. ವಾರ್ಷಿಕವಾಗಿ ಎರಡು ಬೆಳೆಗಳನ್ನು ಬೆಳೆಯಲು ಅನುಕೂಲವಾಗಿದೆ. ಮೀನು ಸಾಕಾಣಿಕೆ ಮಾಡಲು ಸಹ ಕೃಷಿ ಹೊಂಡಗಳು ಸಹಕಾರಿಯಾಗಿದೆ. ಕುಡಿಯುವ ನೀರು ಹಾಗೂ ಪಶು ಸಂಗೋಪನೆಗೂ ಸಹ ನೆರವಾಗಿದೆ.





# ನೀರಿನ ಸಂರಕ್ಷಣೆಯ ಮಹತ್ವ

ಮಣ್ಣು ಮತ್ತು ನೀರು ಮನುಷ್ಯ ಅತಿ ಹೆಚ್ಚು ಬಳಸಲ್ಪಡುವಂತಹ ಮತ್ತು ಆಹಾರವನ್ನು ಉತ್ಪಾದನೆ ಮಾಡಲು ಮನುಷ್ಯ ಅವಲಂಬಿಸಿರುವಂತಹ ಅತ್ಯಂತ ಮಹತ್ವದ ನೈಸರ್ಗಿಕ ಸಂಪನ್ಮೂಲಗಳಾಗಿವೆ.

ಇತ್ತೀಚೆಗೆ ನೀರಿನ ಕೊರತೆ ಮತ್ತು ಮಣ್ಣಿನ ಸವಕಳಿಯಿಂದ ದೇಶದ ಹೆಚ್ಚಿನ ಕೃಷಿ ಭೂಮಿ ಬರಡು ಭೂಮಿಯಾಗಿ ಪರಿವರ್ತನೆ ಆಗುತ್ತಿದೆ. ಹೆಚ್ಚುತ್ತಿರುವ ಕೊಳವೆಬಾವಿಗಳಿಂದಾಗಿ ನೈಸರ್ಗಿಕ ನೀರಿನ ಸಂರಕ್ಷಣಾ ವಿಧಾನಗಳು ಮತ್ತು ಪಾರಂಪರಿಕ ನೀರು ಸಂರಕ್ಷಣಾ ವಿಧಾನಗಳು ನಶಿಸಿ ಹೋಗುತ್ತಿವೆ. ಅದರಲ್ಲೂ ವಿಶೇಷವಾಗಿ ಕೆರೆಗಳು ಹೂಳು ತುಂಬಿ, ಬೇರೆ ಬೇರೆ ಕಾರಣಕ್ಕೆ ಅತಿಕ್ರಮಣವಾಗಿ ಅಥವಾ ಸರ್ಕಾರದ ವಿವಿಧ ಅಭಿವೃದ್ಧಿ ಚಟುವಟಿಕೆಗಳಿಗೆ ಬಳಕೆಯಾಗಿ ಸಂಪೂರ್ಣವಾಗಿ ನಶಿಸಿಹೋಗುತ್ತಿವೆ.

ಇತಿಹಾಸದ ಪುಟಗಳನ್ನು ತಿರುವಿ ನೋಡಿದಾಗ ಅದರಲ್ಲೂ ವಿಶೇಷವಾಗಿ ದಕ್ಷಿಣ ಭಾರತದ ಇತಿಹಾಸವನ್ನು ಅಧ್ಯಯನ ಮಾಡಿದಾಗ ಕೆರೆಗಳು ನಾಗರಿಕತೆಯ ಅಭಿವೃದ್ಧಿಯಲ್ಲಿ ಬಹಳ ಮಹತ್ವದ ಪಾತ್ರ ವಹಿಸಿವೆ ಎಂಬ ಅಂಶ ಗಮನ ಸೆಳೆಯುತ್ತದೆ. ನಮ್ಮ ನಾಗರಿಕತೆ ಬೆಳೆದು ಬಂದಿರುವಂತದ್ದು ನದಿ ದಡದ ಮೇಲೆ ಅಥವಾ ಕೆರೆಗಳ ಸುತ್ತಮುತ್ತ. ಹೆಚ್ಚುತ್ತಿರುವ ಕೊಳವೆ ಬಾವಿಗಳ ಪರಿಣಾಮವಾಗಿ ಅಂತರ್ಜಲದ ಮಟ್ಟ ಕುಸಿಯುತ್ತಿದೆ. ವರುಷದಿಂದ ವರುಷಕ್ಕೆ ಕೊಳವೆ ಬಾವಿಗಳ ಆಳ ಹೆಚ್ಚುತ್ತಿದ್ದರೂ ಕೂಡ ನೀರು ಸಿಗದ ಪರಿಸ್ಥಿತಿ ಉಂಟಾಗಿದೆ.

ಭಾರತ ದೇಶ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಒಳಗೊಂಡಿರುವ ದೇಶ. ಕೃಷಿಯನ್ನು ನಂಬಿ ಶೇಕಡಾ 50ಕ್ಕೂ ಹೆಚ್ಚು ಜನ ಜೀವನ ಸಾಗಿಸುವ ಮತ್ತು ದೇಶದ ಶೇಕಡಾ 60ಕ್ಕೂ ಹೆಚ್ಚಿನ ಜನರಿಗೆ ಉದ್ಯೋಗ ನೀಡಿರುವ ಕ್ಷೇತ್ರ ಈ ಕೃಷಿ ಕ್ಷೇತ್ರ. ಕೃಷಿಕರನ್ನು ನಾವು ದೇಶದ ಬೆನ್ನೆಲುಬು ಎಂದು ಕರೆಯುತ್ತೇವೆ. ಜಗತ್ತಿನಲ್ಲಿ ಲಭ್ಯವಿರುವ ನೀರಿನಲ್ಲಿ ಶೇಕಡ 98ರಷ್ಟು ಭಾಗ ಸಮುದ್ರದಲ್ಲೂ ಅಥವಾ ಹಿಮಗಡ್ಡೆ ರೂಪದಲ್ಲೂ ಇದ್ದು ಬಳಕೆಗೆ ಯೋಗ್ಯವಾಗಿಲ್ಲ. ಉಳಿದ ಶೇಕಡಾ ಎರಡರಷ್ಟು ನೀರು ಪ್ರಪಂಚದ ಎಲ್ಲ ನದಿ, ಕೆರೆ, ಬಾವಿ, ಜಲಾಶಯ, ಸರೋವರ ಮತ್ತು ತೇವಾಂಶದ ರೂಪದಲ್ಲಿದೆ. ಇದೇ ನೀರನ್ನು ಕೃಷಿ, ಕೈಗಾರಿಕೆ, ಗೃಹ ಬಳಕೆಗೆ ಬಳಸಬೇಕಾಗಿದೆ. ಇಷ್ಟು ಕಡಿಮೆ ಪ್ರಮಾಣದ ನೀರು ನಮಗೆ ಲಭ್ಯವಿರುವ ಕಾರಣ ನೀರಿನ ಸಂರಕ್ಷಣೆ ಇಂದಿನ ಅತ್ಯಂತ ಅವಶ್ಯಕವಾದಂತಹ ಕಾರ್ಯವಾಗಿದೆ.

ಜನಸಂಖ್ಯೆ ಏರಿದಂತೆ, ನಗರಗಳು ಬೆಳೆದಂತೆ, ಕೈಗಾರಿಕೀಕರಣ ಹೆಚ್ಚಾದಂತೆ ನೀರಿನ ಬಳಕೆ ಹೆಚ್ಚಾಗುತ್ತಿದೆ. ವೇಸ್ಟ್ ವಾಟರ್‌ಅಥವಾ ಬಳಸಿ ಬಿಟ್ಟಂತ ನೀರು ಪುನಃ ಬಳಕೆಗೆ ಯೋಗ್ಯ ನೀರಾಗಿ ಪರಿವರ್ತನೆ ಹೊಂದಲು ಅನೇಕ ವರ್ಷಗಳೇ ತಗುಲುತ್ತದೆ.

ನಮ್ಮ ದೇಶದ ಒಟ್ಟು 398.27 ಮಿಲಿಯನ್ ಹೆಕ್ಟೇರ್ ಪ್ರದೇಶದಲ್ಲಿ ಸುಮಾರು 97.85 ಮಿಲಿಯನ್ ಹೆಕ್ಟೇರ್ ಎತ್ತರ ಪ್ರದೇಶ, 29.7% ಭೂಪ್ರದೇಶ ಲ್ಯಾಂಡ್ ಡಿಗ್ರಿಡೇಶನ್ ಆಗಿದೆ. ಇದು 2018–19 ನೇ ಸಾಲಿನ ಅಂಕಿ ಅಂಶವಾಗಿದೆ.ಈ ಅಂಕಿ ಅಂಶಗಳನ್ನು 2021 ರಲ್ಲಿ ಸ್ಪೇಸ್ ಅಪ್ಲಿಕೇಶನ್ ಸೆಂಟರ್ ಅಹಮದಾಬಾದ್ ಇವರು ಪ್ರಕಟಿಸಿದ್ದಾರೆ. ಈ ಸ್ಪೇಸ್ ಅಪ್ಲಿಕೇಶನ್ ಸೆಂಟರ್ ಇಸ್ರೋ ಅಡಿಯಲ್ಲಿ ಬರುತ್ತದೆ. 2018–19ನೇ ಸಾಲಿನ ಅಂಕಿ ಅಂಶಗಳ ಪ್ರಕಾರ ನಮ್ಮ ದೇಶದ ಒಟ್ಟು ಭೂ ಪ್ರದೇಶದ 81.48 ಮಿಲಿಯನ್ ಹೆಕ್ಟೇರ್ ಪ್ರದೇಶ ಮರುಭೂಮಿಯಾಗಿ ಪರಿವರ್ತನೆಗೊಂಡಿದ್ದು 2003 ರಿಂದ 2015 ನೇ ಇಸವಿ ನಡುವೆ ಸುಮಾರು 82.64 ಮಿಲಿಯನ್ ಹೆಕ್ಟೇರ್ ಪ್ರದೇಶ ಮರುಭೂಮಿಯಾಗಿ ಪರಿವರ್ತನೆಯಾಗಿದೆ. ನಮ್ಮ ದೇಶದಲ್ಲಿ ಜನಸಂಖ್ಯಾ ಸಂಪನ್ಮೂಲ ಜಗತ್ತಿನ 18% ಇದ್ದು ನೀರಿನ ಸಂಪನ್ಮೂಲ ಕೇವಲ 4% ಇದೆ. ದಿನದಿಂದ ದಿನಕ್ಕೆ ನೀರಿನ ಕೊರತೆ ಎದುರಿಸುತ್ತಿರುವ ಜನರ ಸಂಖ್ಯೆ ಹೆಚ್ಚಾಗುತ್ತಿದೆ. ರೈಲ್ವೆ ಮೂಲಕ ಕೆಲವು ನಗರಗಳಿಗೆ ನೀರನ್ನು ಒದಗಿಸಿರುವುದನ್ನು, 2019ರಲ್ಲಿ ಚೆನ್ನೈ ನಗರದಲ್ಲಿ ಸುಮಾರು 90ಲಕ್ಷ ಜನ ನೀರಿನ ಕೊರತೆಯಿಂದ ಬಳಲಿರುವುದನ್ನು ನೋಡಿದ್ದೇವೆ.

ನ್ಯಾಷನಲ್ ಇನ್ಸಿಟ್ಯುಶನ್ ಫಾರ್ ಟ್ರಾನ್ಸ್‌ಫರ್ಮಿಂಗ್ ಇಂಡಿಯಾ (ನೀತಿ ಆಯೋಗ) ಹೇಳುವ ಪ್ರಕಾರ ನಮ್ಮ ದೇಶದ 21 ಪ್ರಮುಖ ನಗರಗಳಲ್ಲಿ (ನಮ್ಮ ದೇಶದ ರಾಜಧಾನಿ ದೆಹಲಿಯೂ ಸೇರಿದಂತೆ) ಅಂತರ್ಜಲ ಮಟ್ಟ ಸಂಪೂರ್ಣ ಕುಸಿದಿದೆ. ಪ್ರತಿ ವರುಷ ನಮ್ಮ ದೇಶದಲ್ಲಿ ಎರಡು ಲಕ್ಷ ಜನ ನೀರಿಗೆ ಸಂಬಂಧಪಟ್ಟಂತಹ ಕಾಯಿಲೆಯಿಂದ ಅಥವಾ ಕಲುಷಿತ ನೀರಿನ ಸೇವನೆಯಿಂದ ಸಾವನ್ನಪ್ಪುತ್ತಿದ್ದಾರೆ. ಇದನ್ನರಿತ ಮನುವಿಕಾಸ ಸಂಸ್ಥೆಯು ನೀರಿನ ಸಂರಕ್ಷಣೆ ಹಾಗೂ ಪರಿಸರ ಸಂರಕ್ಷಣೆಯನ್ನು ಮುಖ್ಯ ಗುರಿಯಾಗಿಟ್ಟುಕೊಂಡು ಕಾರ್ಯಪ್ರವೃತ್ತವಾಗಿದೆ.



# ಹಳ್ಳಿಕಾನ್ ಕೆರೆ ಪುನರುಜ್ಜೀವನಗೊಳಿಸಲು ಕೈ ಜೋಡಿಸಿದ ಗಣಪತಿ ಭಟ್ಟ

ನೀರು ಅತ್ಯಮೂಲ್ಯವಾದ ಸಂಪನ್ಮೂಲ; ಸಕಲಚರಾಚರ ವಸ್ತುಗಳಿಗೆ, ಕೃಷಿ ಚಟುವಟಿಕೆಗೆ ನೀರು ಅತ್ಯಗತ್ಯ. ಮಲೆನಾಡು ಮಳೆಗಾಲದಲ್ಲಿ ಹೆಚ್ಚಿನ ಮಳೆ ಪಡೆದು ಹಚ್ಚ ಹಸಿರ ಪರಿಸರವನ್ನು ಹೊಂದಿದ್ದರೂ ಸಹ ಬೇಸಿಗೆ ಕಾಲ ಬಂತೆಂದರೆ ಕೆಲವು ಕಡೆ ನೀರಿನ ಅಭಾವ ಕಂಡು ಬರುತ್ತಿದೆ. ಉತ್ತರಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಕುಳವೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನ ಹಳ್ಳಿಕಾನ್ ಗ್ರಾಮದಲ್ಲಿ ಮಾರ್ಚ ತಿಂಗಳ ತರುವಾಯ ನೀರಿನ ಕೊರತೆಯ ತೀವ್ರತೆಯ ಪ್ರಮಾಣ ಹೆಚ್ಚುತ್ತದೆ. ಊರಿನಲ್ಲಿ ಕುಡಿಯಲು ಎರಡು ತೆರೆದ ಬಾವಿಗಳಿದ್ದು ಜಾನುವಾರುಗಳ ನಿರ್ವಹಣೆಗೆ ಅಭಾವ ಉಂಟಾಗಿದೆ. ಇಡೀ ಊರಿಗೆ ಅನಾದಿಕಾಲದ ಕೆರೆಯೊಂದು ನೀರಿನ ಮೂಲಗಳಿಗೆ ಮುಖ್ಯ ಜೀವಾಳವಾಗಿದ್ದು, ಅದು ಸಂಪೂರ್ಣ ಹೂಳಿನಿಂದ ಕೂಡಿ ಸಮರ್ಪಕ ರೀತಿಯಲ್ಲಿ ನೀರಿನ ಸಂಗ್ರಹಣೆ ಸಾಧ್ಯವಾಗುತ್ತಿರಲಿಲ್ಲ.

ಇದನ್ನು ಅರಿತ ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟರವರು ತಮ್ಮ ಸ್ವಂತ ಖರ್ಚಿನಿಂದ ಹಳ್ಳಿಕಾನ್ ಗ್ರಾಮದ ಕೆರೆಯ ಭಾಗಶಃ ಹೂಳೆತ್ತಿ ನೀರಿನ ಸಂಗ್ರಹಣಾ ಪ್ರಮಾಣ ಹೆಚ್ಚುವಂತೆ ಮಾಡಿದ್ದಾರೆ. ಹಿಟಾಚಿ ಯಂತ್ರ ಹಾಗೂ ಟ್ರ್ಯಾಕ್ಟರ್‌ಗಳು ಸಂಚರಿಸದೆ ಇರುವಷ್ಟು ಜವಳು ತುಂಬಿರುವದರಿಂದ ಮುಂದಿನ ವರ್ಷವೂ ಕೂಡ ಕೆರೆ ಹೂಳೆತ್ತಿ ಅಭಿವೃದ್ಧಿಪಡಿಸುವುದಾಗಿ ತಿಳಿಸಿದ್ದಾರೆ. ಭಟ್ಟರ ಈ ಸಮಾಜಮುಖಿ ಕಾರ್ಯಕ್ಕೆ ಹಳ್ಳಿಕಾನ್ ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟರವರು ಮನುವಿಕಾಸ ಸಂಸ್ಥೆಯ ವತಿಯಿಂದ ಉತ್ತರಕನ್ನಡ, ಹಾವೇರಿ, ಶಿವಮೊಗ್ಗ, ಧಾರವಾಡ ಜಿಲ್ಲೆಗಳಲ್ಲಿ 225 ಕೆರೆಗಳನ್ನು ರೈತರ ಸಹಯೋಗದೊಂದಿಗೆ ಉಚಿತವಾಗಿ ಹೂಳೆತ್ತಿ "ಬಯಲು ಸೀಮೆಯ ಭಗೀರಥ" ಎಂದೆ ಜನಪ್ರಿಯರಾಗಿದ್ದಾರೆ. ಪರಿಸರ, ಶಿಕ್ಷಣ, ಮಹಿಳಾ ಸಬಲೀಕರಣ, ರೈತ ಉತ್ಪಾದಕ ಕಂಪನಿಗಳನ್ನು ಆರಂಭಿಸಿ ಸಮಾಜ ಮುಖಿ ಕಾರ್ಯಗಳಲ್ಲಿ ಸದಾ ಮುಂದಾಗಿದ್ದಾರೆ.





# ಮನುವಿಕಾಸದಿಂದ ಸುಸ್ಥಿರ ಪರಿಸರ ಹಾಗೂ ಹವಾಮಾನ ಬದಲಾವಣೆ ಕುರಿತಾದ ಜಾಗೃತಿ




ಹವಾಮಾನ ಬದಲಾವಣೆ ಎಂಬುದು ಇಂದಿನ ದಿನಮಾನದಲ್ಲಿ ಇಡೀ ವಿಶ್ವವನ್ನು ಬೇರೆ ಬೇರೆ ಬಗೆಯಲ್ಲಿ ಕಾಡುತ್ತಿದೆ. ತಾಪಮಾನ ಏರುವುದರಿಂದ ಆಗಬಹುದಾದ ಅಪಾಯಗಳ ಬಗ್ಗೆ ಈಗಾಗಲೇ ವಿಜ್ಞಾನಿಗಳು, ಪರಿಸರ ತಜ್ಞರು ಎಚ್ಚರಿಕೆಯ ಕರೆ ಗಂಟೆ ಬಾರಿಸಿದ್ದಾರೆ. ವಿಶೇಷವಾಗಿ ತಾಪಮಾನ $2^{0}C$ ಹೆಚ್ಚಿದರೆ ಅದರಿಂದ ಸಮುದ್ರ ಮಟ್ಟ ಹೆಚ್ಚಿ ಏನೇನು ಪರಿಣಾಮಗಳು ಆಗಬಹುದು ಎಂಬ ಬಗ್ಗೆ ತಜ್ಞರು ವಿವರವಾಗಿ ತೆರೆದಿಟ್ಟಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಹವಾಮಾನ ಬದಲಾವಣೆ ತೀವ್ರಗತಿಯಲ್ಲಿದೆ. ಉಷ್ಣತೆ ಏರಿಕೆ, ಮಳೆ ಪ್ರಮಾಣ ಬದಲಾವಣೆ ನಮ್ಮ ಅನುಭವಕ್ಕೆ ಬಂದಿದೆ. ಹವಾಮಾನವನ್ನೇ ಅವಲಂಬಿಸಿದ ಕೃಷಿ ಕ್ಷೇತ್ರದ ಮೇಲೆ ತಾಪಮಾನ ಬದಲಾವಣೆಯ ಕರಾಳ ಛಾಯೆ ಈಗಾಗಲೇ ಬೃಹತ್ ಮಟ್ಟಿಗೆ ಗೋಚರಿಸುತ್ತಿದೆ. ಜಾಗತಿಕ ತಾಪಮಾನ ಏರಿಕೆಯಿಂದ ಕೃಷಿಯಲ್ಲಿ ಅನುಕೂಲ ಹಾಗೂ ಪ್ರತಿಕೂಲ ಪರಿಣಾಮಗಳೆರಡೂ ಇವೆ. ಆದರೆ, ತೊಂದರೆಯೇ ಹೆಚ್ಚು ಎಂಬುದು ಚಿಂತನೆಯ ಸಂಗತಿ.



ವಾತಾವರಣದಲ್ಲಿ ಇಂಗಾಲದ ಡೈಆಕ್ಸೈಡ್ ಅನಿಲದ ಏರಿಕೆಯು ಬೆಳೆಗಳಿಗೆ ಅನುಕೂಲಕರವಾಗಿ ಉತ್ಪಾದಕತೆಯಲ್ಲಿ ಹೆಚ್ಚಳವಾಗಬಹುದಾದರೂ, ತಾಪಮಾನದ ಏರಿಕೆಯಿಂದಾಗಿ ಬೆಳೆಗಳ ಉಸಿರಾಟ ಹಾಗೂ ಭಾಷ್ಪೀಭವನದಲ್ಲಿ ಹೆಚ್ಚಳ ಉಂಟಾಗಿ ಬೆಳೆಗಳ ಬೆಳವಣಿಗೆ ಅವಧಿ ಕಡಿಮೆಯಾಗುತ್ತದೆ. ಇದರಿಂದ ಉತ್ಪಾದಕತೆ ಕುಂಠಿತವಾಗಲಿದೆ. ಬೀಜದ ಉತ್ಪತ್ತಿ ಹಾಗೂ ಅದರ ಗುಣಮಟ್ಟದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ. ಅಲ್ಲದೆ, ರಸಗೊಬ್ಬರಗಳ ಕ್ಷಮತೆ ಕಡಿಮೆಯಾಗುವ ಸಾಧ್ಯತೆ ಹೆಚ್ಚು. ಕೀಟಗಳ ಹಾವಳಿ ಮತ್ತು ರೋಗಗಳ ತೀವ್ರತೆಯ ಮೇಲೂ ಇದರ ಪರಿಣಾಮ ಉಂಟಾಗುವ ಅಪಾಯವಿದೆ.

ಭಾರತದ ಕೃಷಿ ಕ್ಷೇತ್ರದಲ್ಲಿ ಶೇ.68ರಷ್ಟು ಒಣ ಬೇಸಾಯವಿದೆ. "ಮಾನ್ಸೂನ್" ಮಳೆಗೆ ಕೃಷಿಯ ಲೈಫ್‌ಲೈನ್ ಎಂದೇ ಹೇಳಲಾಗುತ್ತದೆ. ಮಳೆ ಸುರಿಯುವಿಕೆಯಲ್ಲಿ ಏನೇ ವ್ಯತ್ಯಾಸವಾದರೂ ನೇರವಾಗಿ ಕೃಷಿ ಹಾಗೂ ಕೃಷಿ ಅವಲಂಬಿತ ಕ್ಷೇತ್ರಗಳ ಚಟುವಟಿಕೆಗಳ ಮೇಲೆ ಪರಿಣಾಮ ಬೀರುತ್ತದೆ. ವಾತಾವರಣ ಬದಲಾವಣೆ ಕೃಷಿ ಚಟುವಟಿಕೆಗಳ ಮೇಲೆ ಯಾವೆಲ್ಲ ಪರಿಣಾಮ ಬೀರುತ್ತದೆ ಎಂಬುದು ನಮಗೆ ಈಗಾಗಲೇ ತಕ್ಕ ಮಟ್ಟಿಗೆ ಗೋಚರವಾಗಿದೆ. ಉಷ್ಣತೆ ಹೆಚ್ಚಾದಂತೆ ಬೆಳೆ ಅವಧಿ ಕಡಿಮೆಯಾಗಿ ಧಾನ್ಯಗಳ ಇಳುವರಿ ಪ್ರಮಾಣ ಇಳಿಯುತ್ತದೆ. ಹೆಚ್ಚು ತಾಪಮಾನದಿಂದಾಗಿ ಸಸ್ಯಗಳು ತೇವಾಂಶವನ್ನು ಬಳಸಿಕೊಳ್ಳುವ ಸಾಮರ್ಥ್ಯಕ್ಕೂ ಅಡಚಣೆಯಾಗುತ್ತದೆ. ತಾಪಮಾನ ಹೆಚ್ಚಳದಿಂದ ಧಾನ್ಯಗಳ ಇಳುವರಿ ಕುಂಠಿತವಾಗುವುದರಿಂದ ಒಟ್ಟಾರೆ ಆಹಾರ ಧಾನ್ಯಗಳ ಉತ್ಪಾದನೆಯೂ ಕುಸಿಯಲಿದೆ. ಆಹಾರದ ಬೆಲೆ ಏರಿಕೆಯಾಗುತ್ತವೆ. ಕೃಷಿ ಉತ್ಪನ್ನಗಳ ಉತ್ಪಾದನೆ ಕಡಿಮೆಯಾದರೆ ಅದು ದೇಶದ ಅರ್ಥ ವ್ಯವಸ್ಥೆ ಮೇಲೂ ತೀವ್ರ ಪರಿಣಾಮ ಬೀರುತ್ತದೆ.




ಈ ಎಲ್ಲ ಪ್ರತಿಕೂಲ ಅಂಶಗಳನ್ನು ಗಮನದಲ್ಲಿರಿಸಿಕೊಂಡು "ಊರು ಕಟ್ಟುವ ಮೊದಲು ಕೆರೆಕಟ್ಟು" ಎನ್ನುವ ನಾಣ್ಣುಡಿಯಂತೆ ನಾಳಿನ ನೀರ ನೆಮ್ಮದಿಗಾಗಿ ಜಲ ಸುಸ್ಥಿರತೆಯ ಹಾದಿ ಈ ಕ್ಷಣದಿಂದಲೇ ಮಾನವ ಸಮುದಾಯಕ್ಕೆ ಅನಿವಾರ್ಯತೆಯ ಹಂತ ತಲುಪಿದೆ. ಮನುವಿಕಾಸವು ಈಗಾಗಲೇ ಪಾರಂಪರಿಕ ಜಲ ಸಂರಕ್ಷಣಾ ವಿಧಾನಗಳಾದ ಅವಸಾನದ ಅಂಚಿನಲ್ಲಿರುವ ಕೆರೆಗಳ ಪುನರುಜ್ಜೀವನ, ಕೃಷಿ ಹೊಂಡಗಳ ನಿರ್ಮಾಣ ಸುಸ್ಥಿರ ಕೃಷಿಯ ಪರಿಕಲ್ಪನೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಬಳಕೆ, ಹವಾಮಾನ ಬದಲಾವಣೆಯ ಗಂಭೀರ ಪರಿಣಾಮಗಳನ್ನು ಜನ ಸಮುದಾಯಕ್ಕೆ ಅದರಲ್ಲೂ ಅದರ ನೇರ ಪರಿಣಾಮವನ್ನು ಎದುರಿಸುತ್ತಿರುವ ರೈತಾಪಿ ಸಮುದಾಯಕ್ಕೆ ನಿರಂತರವಾಗಿ ಕಳೆದ ಎರಡು ದಶಕಗಳಿಂದ ಒದಗಿಸುತ್ತಾ ಬಂದಿದೆ. ಸುಸ್ಥಿರ ಪರಿಸರ ಮತ್ತು ದಕ್ಷ ನೀರಿನ ಬಳಕೆಯ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವದರ ಮೂಲಕ ನೆಮ್ಮದಿಯ ಬದುಕನ್ನು ಕಟ್ಟಿಕೊಳ್ಳಲು ಸಂಸ್ಥೆ ಸಹಕಾರಿಯಾಗಿದೆ.

ಕಳೆದ ಎರಡು ವರ್ಷಗಳಿಂದ ಜರ್ಮನಿ ಮೂಲದ ಹನ್ಸ್ ಸೀಡೇಲ್ ಫೌಂಡೇಶನ್ ಇಂಡಿಯಾದ ಆರ್ಥಿಕ ನೆರವಿನೊಂದಿಗೆ ಮನುವಿಕಾಸವು ನೀರು ಮತ್ತು ಮಣ್ಣಿನ ನಿರ್ವಹಣೆಯ ಕುರಿತು ರೈತರಿಗೆ ಮತ್ತು ಸಾರ್ವಜನಿಕ ಪ್ರತಿನಿಧಿಗಳಿಗೆ ಸ್ಥಳೀಯ ಮತ್ತು ರಾಜ್ಯ ಮಟ್ಟದ ತರಬೇತಿ ಮತ್ತು ಕಾರ್ಯಾಗಾರಗಳನ್ನು ಆಯೋಜಿಸುತ್ತಿದೆ. ಇದರ ಭಾಗವಾಗಿ, ಮನುವಿಕಾಸವು ಸಿದ್ದಾಪುರ ತಾಲೂಕಿನ ಕರ್ಜಗಿ ಗ್ರಾಮದಲ್ಲಿ ನೆಲ–ಜಲ ಮತ್ತು ಪರಿಸರ ಅಧ್ಯಯನ ಕೇಂದ್ರವನ್ನು ಅಭಿವೃದ್ಧಿಪಡಿಸಿದೆ.

ಜಾಗತಿಕ ಜಲ ಸಂಕಷ್ಟವನ್ನು ಸ್ಥಳೀಯ ಮಟ್ಟದಲ್ಲಿ ಬಗೆಹರಿಸಿಕೊಳ್ಳುವ ನಿಟ್ಟಿನಲ್ಲಿ ಮನುವಿಕಾಸವು ಸಮುದಾಯದ ಮಟ್ಟದಲ್ಲಿ ಜಲ ಸಾಕ್ಷರತೆ ಮತ್ತು ಪರಿಸರ ಪೂರಕ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳನ್ನು ಉತ್ತೇಜಿಸುವದರ ಮೂಲಕ ದೇಶದ ಜಲ ಸುಭದ್ರತೆಯ ಅಭಿವೃದ್ಧಿಯಲ್ಲಿ ಕೈ ಜೋಡಿಸಲು ಸಂಸ್ಥೆ ಶ್ರಮಿಸುತ್ತಿದೆ.

ಅಭಿವೃದ್ಧಿಶೀಲ ಭಾರತದಂತಹ ದೇಶದಲ್ಲಿ ಸಮುದಾಯದ ಮಟ್ಟದಲ್ಲಿ ಅಭಿವೃದ್ಧಿಯಾದಾಗ ಮಾತ್ರ ಸಮಗ್ರ ದೇಶದ ಅಭಿವೃದ್ಧಿಯ ಪರಿಕಲ್ಪನೆ ಸಾಧ್ಯ. ಈ ನಿಟ್ಟಿನಲ್ಲಿ ತಾವೂ ಸಹ ಈ ಪ್ರಯತ್ನಕ್ಕೆ ಕೈ ಜೋಡಿಸಬೇಕೆಂಬುದು ನಮ್ಮ ಉದ್ದೇಶ.









# ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ



ಅತಿಯಾದ ಜನಸಂಖ್ಯೆ ಹಾಗೂ ಗ್ರಾಮೀಣ ಪ್ರದೇಶವನ್ನು ಹೊಂದಿರುವ ನಮ್ಮ ಭಾರತ ದೇಶದಲ್ಲಿ ಕಂಡು ಬರುವ ದೊಡ್ಡ ಸಮಸ್ಯೆ ಎಂದರೆ ನಿರುದ್ಯೋಗ, ಬಡತನ, ಮೂಲಭೂತ ಅವಶ್ಯಕತೆಗಳ ಕೊರತೆ. ಗ್ರಾಮೀಣ ಪ್ರದೇಶದ ಅಭಿವೃದ್ಧಿ ಹಾಗೂ ಗ್ರಾಮೀಣ ಜನರಿಗೆ ಉದ್ಯೋಗ ಸೃಷ್ಟಿಸಿಕೊಡುವ ಉದ್ದೇಶದಿಂದ ಭಾರತ ಸರ್ಕಾರವು 2005 ನೇ ಇಸವಿಯಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮವನ್ನು ಜಾರಿಗೆ ತಂದಿತು.



ಸರ್ಕಾರದ ಉದ್ದೇಶ ಸಮರ್ಪಕವಾಗಿದ್ದರೂ ಸಹ ಕೆಲವೊಮ್ಮೆ ಅಧಿಕಾರಿಗಳ ವರ್ತನೆ ಹಾಗೂ ಯೋಜನೆಯ ಬಗ್ಗೆ ಸರಿಯಾದ ಮಾಹಿತಿ ಜನರಲ್ಲಿ ಇಲ್ಲದೇ ಇರುವುದರಿಂದ ಅದರ ಪ್ರಯೋಜನದಿಂದ ಜನರು ವಂಚಿತರಾಗುತ್ತಿರುವುದನ್ನು ಗಮನಿಸಿದ ಮನುವಿಕಾಸ ಸಂಸ್ಥೆಯು ಗಾಮೀಣ ಜನರಿಗೆ ಈ ಯೋಜನೆಯನ್ನು ತಲುಪಿಸುವ ಕಾರ್ಯಕ್ಕೆ ಮುಂದಾಗಿದೆ. ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನರಿಗೆ ಯೋಜನೆಯ ಪ್ರಯೋಜನಗಳ ಬಗ್ಗೆ ಮನವರಿಕೆ ಮಾಡಿ ಉದ್ಯೋಗ ಕಾರ್ಡ್ ಮಾಡಿಸಿಕೊಟ್ಟು ಅವರಿಗೆ ತಮ್ಮ ಪಂಚಾಯತಿಯ ವ್ಯಾಪ್ತಿಯಲ್ಲಿ ಕೆಲಸ ಕೊಡಿಸುವ ಕಾರ್ಯವನ್ನು ಮಾಡುತ್ತಾ ಬಂದಿದೆ.

ಉತ್ತರ ಕನ್ನಡ, ಹಾವೇರಿ, ಧಾರವಾಡ ಜಿಲ್ಲೆಗಳ ವಿವಿಧ ತಾಲೂಕುಗಳ ಗ್ರಾಮ ಪಂಚಾಯತಿಯಲ್ಲಿ ನರೇಗಾ ಯೋಜನೆಯ ಅಡಿಯಲ್ಲಿ ಜನರಿಗೆ ಕೆಲಸವನ್ನು ಕೊಡಿಸಿದೆ. ಈ ಯೋಜನೆಯಲ್ಲಿ ಅತ್ಯುತ್ತಮ ರೀತಿಯಲ್ಲಿ ಕೆಲಸ ನಿರ್ವಹಿಸಿದ ಕಾರ್ಮಿಕರಿಗೆ ಮನುವಿಕಾಸ ಸಂಸ್ಥೆಯ ವತಿಯಿಂದ ಉಚಿತವಾಗಿ ಗುದ್ದಲಿ, ಪಿಕಾಸುಗಳನ್ನು ವಿತರಿಸಿದೆ. ಕೆರೆಗಳ ಅಭಿವೃದ್ಧಿ, ಬಚ್ಚಲುಗುಂಡಿ ನಿರ್ಮಾಣ, ಕೋಡಿ ನಿರ್ಮಾಣ, ರಸ್ತೆ ಅಭಿವೃದ್ಧಿ, ಚರಂಡಿ ನಿರ್ಮಾಣ, ಶಾಲಾ ಆವರಣ ಹಾಗೂ ಮೈದಾನ ಅಭಿವೃದ್ಧಿ, ಉದ್ಯಾನವನ ಅಭಿವೃದ್ಧಿ, ಕೊಟ್ಟಿಗೆ ನಿರ್ಮಾಣ, ಕುಡಿಯುವ ನೀರಿನ ಕೊಳದ ನಿರ್ಮಾಣ, ಮನೆಗಳ ನಿರ್ಮಾಣ, ಶೌಚಾಲಯ ನಿರ್ಮಾಣ, ಕಾಲುವೆ ನಿರ್ಮಾಣ ಹೀಗೆ ಅನೇಕ ಅಭಿವೃದ್ಧಿ ಕೆಲಸಗಳ ಮೂಲಕ ಗ್ರಾಮೀಣ ಜನರಿಗೆ ಉದ್ಯೋಗ ಸೃಷ್ಟಿಸುವಲ್ಲಿ ಹಾಗೂ ಗ್ರಾಮೀಣ ಪ್ರದೇಶದ ಅಭಿವೃದ್ಧಿಗಾಗಿ ಮನುವಿಕಾಸ ಸಂಸ್ಥೆಯು ಶ್ರಮಿಸುತ್ತಾ ಬಂದಿದೆ. ಮನುವಿಕಾಸದ ಈ ಜನಸ್ನೇಹಿ ಕಾರ್ಯಕ್ಕೆ ಜನರು ಪ್ರಶಂಸೆ ವ್ಯಕ್ತಪಡಿಸುತ್ತಾರೆ.














# ಸಿದ್ಧಿ ಸಮುದಾಯದ ಅಭಿವೃದ್ಧಿಗೆ ಬೆಳಕಾದ ಮನುವಿಕಾಸ

ಮನುವಿಕಾಸ ಸಂಸ್ಥೆಯು ಹೆಚ್.ಡಿ.ಎಫ್.ಸಿ ಪರಿವರ್ತನ್ ಇವರ ಸಹಯೋಗದಲ್ಲಿ ಕಳೆದೊಂದು ವರ್ಷದಿಂದ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಸಿದ್ದಿ ಬುಡಕಟ್ಟು ಸಮುದಾಯದೊಂದಿಗೆ ಹಾಗೂ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಬಡ ಮೀನುಗಾರ ಸಮುದಾಯದೊಂದಿಗೆ ವಿಶೇಷ ಯೋಜನೆಯನ್ನು ರೂಪಿಸಿ ಕಾರ್ಯ ನಿರ್ವಹಿಸುತ್ತಿದೆ.

ಮನುವಿಕಾಸ ಸಂಸ್ಥೆಯು ಯಲ್ಲಾಪುರ ತಾಲೂಕಿನ ಆಯ್ದ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ 1000 ಸಿದ್ದಿ ಬಡ ಕುಟುಂಬಗಳನ್ನು ಗುರುತಿಸಿ ಆ ಕುಟುಂಬಗಳ ಅಭಿವೃದ್ಧಿಗೆ ಶ್ರಮಿಸುತ್ತಿದೆ.

ಕಾರ್ಯಯೋಜನೆಯ ಪ್ರಥಮ ಭಾಗವಾಗಿ ಸಿದ್ದಿ ಮಹಿಳೆಯರ ಸ್ವ ಸಹಾಯ ಸಂಘಗಳನ್ನು ರಚಿಸಿದೆ. ಸಂಘದ ಪರಿಕಲ್ಪನಾ ತರಬೇತಿ, ಸಂಘದಲ್ಲಿ ಪುಸ್ತಕ ಹಾಗೂ ದಾಖಲಾತಿಗಳ ನಿರ್ವಹಣಾ ತರಬೇತಿ ಸೇರಿದಂತೆ ನಾಯಕತ್ವ ಗುಣ ಹಾಗೂ ಸ್ವ ಉದ್ಯೋಗಕ್ಕೆ ಸಂಬಂಧಪಟ್ಟ ತರಬೇತಿಗಳನ್ನು ನೀಡಿ ಸ್ವ ಸಹಾಯ ಸಂಘಗಳ ಪರಿಕಲ್ಪನೆಗೆ ನೂತನ ಭಾಷ್ಯ ಬರೆದಿದೆ.

ತಾಲೂಕಿನಾದ್ಯಂತ ಈಗಾಗಲೇ ಸರಿಸುಮಾರು 75 ಕ್ಕೂ ಹೆಚ್ಚು ಸ್ವ ಸಹಾಯ ಸಂಘಗಳನ್ನು ರಚಿಸಿ ಸಂಘದ ಪ್ರತಿ ಸದಸ್ಯರಿಗೂ ತರಬೇತಿಗಳನ್ನು ಒದಗಿಸಿರುವದರಿಂದ, ಉತ್ತಮ ರೀತಿಯಲ್ಲಿ ಗುಂಪನ್ನು ಮುನ್ನಡೆಸಿಕೊಂಡು ಹೋಗಲು ಸಹಕಾರಿಯಾಗಿದೆ. ಸ್ವ ಉದ್ಯೋಗವನ್ನು ನಡೆಸಲು ಉತ್ಸುಕರಾಗಿರುವ, ಹಣಕಾಸಿನ ತೊಂದರೆಯನ್ನು ಅನುಭವಿಸುತ್ತಿರುವ ಬುಡಕಟ್ಟು ಸಮುದಾಯದ ಮಹಿಳೆಯರಿಗೆ ಸಂಸ್ಥೆಯ ವತಿಯಿಂದ ಹಣಕಾಸಿನ ನೆರವನ್ನು ನೀಡಿ ಸ್ವ ಉದ್ಯೋಗಕ್ಕೆ ಪ್ರೇರೇಪಿಸುತ್ತಿದೆ. ಈ ನೆರವನ್ನು ಸಾಲದ ರೂಪದಲ್ಲಿ ನೀಡದೆ ಉದ್ಯೋಗಕ್ಕೆ ಬೇಕಾದ ವಿವಿಧ ಬಗೆಯ ಪರಿಕರಗಳನ್ನು ವಿತರಿಸಿದ್ದು, 30 ಜನರು ಇದರ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ.

ಕಾಡಿನ ಉತ್ಪನ್ನವನ್ನು ಯೋಗ್ಯ ರೀತಿಯಲ್ಲಿ ಸಂಗ್ರಹಿಸಿ ಮೌಲ್ಯವರ್ಧನೆ ಮಾಡುವದರಲ್ಲಿ ಸಿದ್ದಿ ಸಮುದಾಯದವರು ಮುಂಚೂಣಿಯಲ್ಲಿದ್ದು, ಕಾಡಿನ ಜೇನು ಕೀಳುವುದರಲ್ಲಿ ಇವರು ಸಾಹಸಿಗಳು. ಆದರೆ ವರ್ಷದಿಂದ ವರ್ಷಕ್ಕೆ ಕಾಡಿಗೆ ಜನರ ಪ್ರವೇಶವನ್ನು ಅರಣ್ಯ ಇಲಾಖೆಯು ಕಠಿಣಗೊಳಿಸುತ್ತಿರುವುದರಿಂದ ಮಾರುಕಟ್ಟೆಗಳಿಗೆ ಜೇನಿನ ಪೂರೈಕೆಯ ಪ್ರಮಾಣವೂ ಸಹ ಕುಂಠಿತವಾಗುತ್ತಿದೆ. ಮನುವಿಕಾಸ ಸಂಸ್ಥೆಯು ಈ ಸಮಸ್ಯೆಯನ್ನು ಮನಗಂಡು 75 ಕುಟುಂಬಗಳಿಗೆ ಉಚಿತವಾಗಿ ಜೇನು ಪೆಟ್ಟಿಗೆಯನ್ನು ವಿತರಿಸಿ ಜೇನು ಕೃಷಿಯ ತರಬೇತಿಯನ್ನು ನೀಡಿ ಸಿದ್ದಿ ಕುಟುಂಬಗಳ ಆದಾಯ ವೃದ್ಧಿಯಾಗುವಂತೆ ಮಾಡಿದೆ. ಇದರ ಜೊತೆಯಲ್ಲಿ ಕೋಳಿ ಸಾಕಾಣಿಕೆಗೂ ಸಹ ಉತ್ತೇಜಿಸಿ 300 ಕುಟುಂಬಗಳಿಗೆ ತಲಾ 10 ರಂತೆ ಉಚಿತವಾಗಿ ಕೋಳಿ ಮರಿಯನ್ನು ಸಹ ವಿತರಿಸಿದೆ.

ಇದೇ ಮೊದಲ ಬಾರಿಗೆ ಮನುವಿಕಾಸ ಸಂಸ್ಥೆಯು ಸಿದ್ದಿ ಸಮುದಾಯದ ಯುವಕ ಯುವತಿಯರಿಗೆ ಉಚಿತವಾಗಿ ಎರಡು ತಿಂಗಳ ಹೋಟೆಲ್ ಮ್ಯಾನೇಜ್‌ಮೆಂಟ್ ತರಬೇತಿಯನ್ನು ಹೆಚ್.ಡಿ.ಎಫ್.ಸಿ ಬ್ಯಾಂಕ್ ಪರಿವರ್ತನ ಇವರ ಸಹಯೋಗದಲ್ಲಿ ಆರಂಭಿಸಿದ್ದು. ಪಾಲ್ಗೊಂಡ 69 ವಿದ್ಯಾರ್ಥಿಗಳ ಪೈಕಿ 40 ವಿದ್ಯಾರ್ಥಿಗಳು ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ಪ್ರತಿಷ್ಠಿತ ಹೋಟೆಲ್ ಹಾಗೂ ರೆಸಾರ್ಟಗಳಲ್ಲಿ ಕೆಲಸ ನಿರ್ವಹಿಸುತ್ತಿರುವುದು ಸಂತಸದ ಸಂಗತಿ.






| ಕ್ರ.ಸಂ | ಕಾರ್ಯಚಟುವಟಿಕೆಗಳು | ಫಲಾನುಭವಿಗಳು |
|---|---|---|
| 01 | ತೋಟಗಾರಿಕಾ ಚಟುವಟಿಕೆಗೆ ಉತ್ತೇಜನ ಪಡೆದ ಕುಟುಂಬಗಳು | 92 |
| 02 | ಜೇನು ಕೃಷಿಯ ಫಲಾನುಭವಿ ಕುಟುಂಬಗಳು | 75 |
| 03 | ರಸ್ತೆ ಬದಿ ಆಹಾರ ಮಳಿಗೆಯ ಫಲಾನುಭವಿಗಳು | 7 |
| 04 | ಸ್ವ ಉದ್ಯೋಗಕ್ಕೆ ಉತ್ತೇಜನ ಪಡೆದ ಫಲಾನುಭವಿಗಳು | 23 |
| 05 | ಕೋಳಿ ಸಾಕಾಣಿಕೆಗೆ ಉತ್ತೇಜನ ಪಡೆದ ಕುಟುಂಬಗಳು | 300 |










## ಮತ್ಸ್ಯೋದ್ಯಮದ ನೆರವಿಗೆ ನಿಂತ ಮನುವಿಕಾಸ

ಮನುವಿಕಾಸ ಸಂಸ್ಥೆಯು ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಬಡ ಮೀನುಗಾರ ಕುಟುಂಬಗಳ ಸರ್ವತೋಮುಖ ಅಭಿವೃದ್ಧಿಗೆ ಹೆಚ್.ಡಿ.ಎಫ್.ಸಿ ಬ್ಯಾಂಕ್ ಪರಿವರ್ತನ ಇವರ ಸಹಯೋಗದಲ್ಲಿ ಅನೇಕ ರೀತಿಯ ಆದಾಯ ವೃದ್ಧಿಸುವ ಚಟುವಟಿಕೆಗಳನ್ನ ರೂಪಿಸಿ ಕಾರ್ಯಗತಗೊಳಿಸಿದೆ. ಇದರ ಭಾಗವಾಗಿ ಮೀನುಗಾರ ಮಹಿಳೆಯರ ಸ್ವ ಸಹಾಯ ಗುಂಪುಗಳನ್ನು ರಚಿಸಿ ಮಹಿಳೆಯರಿಗೆ ಸ್ವ ಸಹಾಯ ಸಂಘಗಳ ಕುರಿತಾಗಿ ಮಾಹಿತಿ ಕಾರ್ಯಗಾರವನ್ನು ಸಹ ಆಯೋಜಿಸಲಾಗುತ್ತಿದೆ.

ಮಾರುಕಟ್ಟೆಯಲ್ಲಿ ಮೀನು ಮಾರಾಟದ ಸಮಯದಲ್ಲಿ ಉಂಟಾಗುವ ತೊಂದರೆಗಳನ್ನು ಅರಿತು ಮೀನು ಮಾರಾಟ ಮಾಡುವ ಮಹಿಳೆಯರಿಗೆ  ಡಿಫ್ರೀಜರ್‌ಗಳನ್ನು ವಿತರಿಸಲಾಗಿದ್ದು, ಮೀನು ಸಾಕಾಣಿಕೆಗೆ ಸಹಾಯಕವಾಗಲು ಪಂಜರಗಳನ್ನು ಉಚಿತವಾಗಿ ವಿತರಿಸಿದೆ. ಒಣ ಮೀನಿನ ಮಾರಾಟಕ್ಕೆ ಉತ್ತೇಜಿಸಿ ಒಣ ಮೀನಿನ ಘಟಕಗಳನ್ನು ಸಹ ಸ್ಥಾಪಿಸಿ ಕೊಡಲಾಗಿದೆ. ಇದರ ಹೊರತಾಗಿ ಮೀನುಗಾರಿಕೆಯೇತರ ಸ್ವ ಉದ್ಯೋಗ ಮಾಡುವ ಮಹಿಳೆಯರಿಗೆ ಸ್ವ ಉದ್ಯೋಗಕ್ಕೆ ಅವಶ್ಯವಿರುವ ಪರಿಕರಗಳನ್ನೂ ವಿತರಿಸಿ ಸ್ವಾವಲಂಬನೆಯ ಬದುಕಿಗೆ ನೀರೆರೆದಿದೆ.

| ಕ್ರ.ಸಂ | ಕಾರ್ಯಚಟುವಟಿಕೆಗಳು | ಫಲಾನುಭವಿಗಳು |
|---|---|---|
| 01 | ಒಣ ಮೀನು ಘಟಕಗಳು | 15 |
| 02 | ಪಂಜರು ಮೀನು ಕೃಷಿಗೆ ಉತ್ತೇಜನ | 5 |
| 03 | ಸ್ವ ಉದ್ಯೋಗಕ್ಕೆ ಉತ್ತೇಜನ ಪಡೆದ ಫಲಾನುಭವಿಗಳು | 22 |
| 04 | ರಸ್ತೆ ಬದಿ ಆಹಾರ ಮಳಿಗೆಯ ಫಲಾನುಭವಿಗಳು | 03 |





# ಮನುವಿಕಾಸ ಸಂಸ್ಥೆಯಿಂದ ಮಹಿಳಾ ಸಬಲೀಕರಣದ ಕಡೆಗೆ ಒಂದು ದಿಟ್ಟ ಹೆಜ್ಜೆ

ಮನುವಿಕಾಸ ಸಂಸ್ಥೆಯು ಈಡೆಲ್‌ಗೀವ್ ಫೌಂಡೇಶನ್ ಸಹಯೋಗದೊಂದಿಗೆ ಮಹಿಳಾ ಸಬಲೀಕರಣದ ಅಡಿಯಲ್ಲಿ ಮಹಿಳೆಯರಿಗಾಗಿ ಕೌಶಲ್ಯ ತರಬೇತಿಯನ್ನು ಉತ್ತರಕನ್ನಡ, ಧಾರವಾಡ, ಶಿವಮೊಗ್ಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಹಮ್ಮಿಕೊಂಡಿದೆ. ಮನುವಿಕಾಸ ಸಂಸ್ಥೆಯ ಮುಖ್ಯ ಉದ್ದೇಶಗಳಲ್ಲಿ ಮಹಿಳಾ ಸಬಲೀಕರಣವೂ ಒಂದು. ಸಂಸ್ಥೆಯು ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ.



ಮಹಿಳೆಯು ಎಲ್ಲಾ ರಂಗದಲ್ಲಿಯೂ ಕೂಡ ಪುರಷರಿಗೆ ಸಮಾನವಾಗಿ ಸಮಾಜದಲ್ಲಿ ತನ್ನ ಛಾಪನ್ನು ಮೂಡಿಸುವಲ್ಲಿ ಮೇಲುಗೈ ಹೊಂದುತ್ತಿದ್ದಾಳೆ. ಆದಾಗ್ಯೂ ಸಮಾಜದಲ್ಲಿ ಮಹಿಳೆಯು ಕೆಲವು ನಿರ್ಬಂಧಗಳನ್ನು ಎದುರಿಸುತ್ತಿದ್ದಾಳೆ. 21 ನೇ ಶತಮಾನದಲ್ಲಿಯೂ ಮಹಿಳೆಯು ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಪುರುಷರಿಗಿಂತ ಹಿಂದೆಯಿದ್ದಾಳೆ ಎನ್ನಬಹುದು. ಈಗಲೂ ಮಹಿಳೆಯು ತನ್ನ ಬಗ್ಗೆ ಯೋಚಿಸುವುದಕ್ಕಿಂತ ತನ್ನ ಕುಟುಂಬ, ಮಕ್ಕಳು ಇವರ ಬಗ್ಗೆ ಯೋಚಿಸುತ್ತಾ ತನ್ನ ಆಸೆ ಆಕಾಂಕ್ಷೆಗಳಿಗೆ ಆದ್ಯತೆ ನೀಡುವುದನ್ನು ಕಡೆಗಣಿಸುತ್ತಿದ್ದಾಳೆ. ಆರ್ಥಿಕವಾಗಿ ಬೇರೆಯವರನ್ನು ಅವಲಂಬಿಸಿದರೆ ತಾನಾಗಿಯೇ ಆತ್ಮಸ್ಥೈರ್ಯವು ಕುಂದುತ್ತಾ ಹೋಗುತ್ತದೆ. ಹೀಗಾಗಿ ಮಹಿಳೆಯರಲ್ಲಿಯೂ ಆತ್ಮಸ್ಥೈರ್ಯದ ಕೊರತೆಯನ್ನು ಕಾಣಬಹುದು. ಮಹಿಳೆಯರಲ್ಲಿ ಆಸಕ್ತಿ ಮತ್ತು ಕೌಶಲ್ಯ ಇದ್ದರೂ ಕೂಡ ಆರ್ಥಿಕ ಸ್ವಾತಂತ್ರ್ಯ ಮತ್ತು ಬೆಂಬಲದ ಕೊರತೆಯಿಂದ ತನ್ನ ಆಸೆ ಆಕಾಂಕ್ಷೆಗಳಿಗೆ ಹೆಚ್ಚು ಪ್ರಾಶಸ್ಯ ನೀಡುವಲ್ಲಿ ಎಡವುತ್ತಿದ್ದಾಳೆ.



ಇದೆಲ್ಲವನ್ನು ಗಮನಿಸಿ ಮನುವಿಕಾಸ ಸಂಸ್ಥೆಯು ಈಡೆಲ್ ಗೀವ್ ಫೌಂಡೇಶನ್ ಸಹಯೋಗದೊಂದಿಗೆ ಆಸಕ್ತ ಮಹಿಳೆಯರಿಗಾಗಿ 60 ದಿನದ ಹೊಲಿಗೆ ತರಬೇತಿ, 5 ದಿನದ ಆಹಾರ ತಯಾರಿಕಾ ತರಬೇತಿ, 60 ದಿನದ ಬ್ಯೂಟಿಶೀಯನ್ ತರಬೇತಿ, 1 ದಿನದ ಹೈನುಗಾರಿಕಾ ತರಬೇತಿ ಮತ್ತು ಸುಸ್ಥಿರ ಕೃಷಿ ತರಬೇತಿಗಳನ್ನು ನೀಡುತ್ತಿದೆ. ಕೌಶಲ್ಯ ತರಬೇತಿಯು ಒಂದು ನಿರ್ದಿಷ್ಟ ಗುರಿಯೊಂದಿಗೆ ನಿರ್ದಿಷ್ಟ ಗುಂಪಿಗೆ ತಲುಪುವುದು ಉತ್ತಮ ಎನ್ನುವುದು ಸಂಸ್ಥೆಯ ಅನಿಸಿಕೆ. ಇದರಿಂದ ಅವರಲ್ಲಿ ಉದ್ಯಮ ಶೀಲತಾ ಮನೋಭಾವನೆಯು ಬೆಳೆಯುವುದಲ್ಲದೇ ತಕ್ಕಮಟ್ಟಿಗೆ ಆರ್ಥಿಕವಾಗಿ ಅವರು ಸಬಲರಾಗುತ್ತಾರೆ.

ಸಮಾಜದಲ್ಲಿ ಮಹಿಳೆಯು ತನ್ನ ನಿಲುವನ್ನು ಗುರುತಿಸಿಕೊಳ್ಳಲು ಸ್ವ ಉದ್ಯೋಗ ಮಾಡುವುದು ಅನಿವಾರ್ಯವಾಗಿದೆ. ಮನುವಿಕಾಸ ಸಂಸ್ಥೆಯು ಮಹಿಳೆಯರ ಸ್ವ ಉದ್ಯೋಗಕ್ಕೆ ಪ್ರಾಶಸ್ತ್ಯ ನೀಡಿ ಅವರಿಗೆ ಬೇಕಾದ ಸವಲತ್ತುಗಳನ್ನು ನೀಡಲು ಮುಂದಾಗಿದೆ. ಅವಶ್ಯವಿರುವವರಿಗೆ ಸರಿಯಾದ ಸಮಯಕ್ಕೆ ಸಾಲ ಸೌಲಭ್ಯವನ್ನು ನೀಡಿ ಅವರ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ನೆರವಾಗುತ್ತಿದೆ. ಸಂಸ್ಥೆಯು ಕೇವಲ ಕೌಶಲ್ಯ ತರಬೇತಿಯನ್ನು ನೀಡಿ ಕೈ ಬಿಡುವುದಿಲ್ಲ ನಿಯಮಿತವಾಗಿ ಅವರ ಜೊತೆ ಸಮಾಲೋಚನೆಗಳನ್ನು ನಡೆಸಿ ಅವರು ಸುಸ್ಥಿರವಾಗುವಲ್ಲಿ ಸಲಹೆಗಳನ್ನು ನೀಡಿ ಮುಖ್ಯ ಪಾತ್ರವಹಿಸುತ್ತಿದೆ.



ಮಹಿಳಾ ಸಬಲೀಕರಣದಿಂದ ಮಾತ್ರವೇ ಸಮಾಜದ ಏಳಿಗೆ ಸಾಧ್ಯ. ಅವರಲ್ಲಿ ಆತ್ಮ ಸ್ಥೈರ್ಯ ಮೂಡಿಸಿ ಅವರ ಆಸೆಗಳಿಗೆ ನೀರೆರೆವ ಕೆಲಸವನ್ನು ಸಂಸ್ಥೆ ಮಾಡುತ್ತಿದೆ. ಮನುವಿಕಾಸ ಸಂಸ್ಥೆಯ ಕೆಲಸ ಕಾರ್ಯಗಳು, ಮುಖ್ಯವಾಗಿ ಮಹಿಳೆಯರ ಪ್ರಗತಿಗಾಗಿ ನಡೆಸುವ ಯೋಜನೆಗಳು, ಉತ್ತಮವಾಗಿದ್ದು ಇದರಿಂದ ಅನೇಕ ಮಹಿಳೆಯರಿಗೆ ಉದ್ಯೋಗ ದೊರೆಯುವಲ್ಲಿ ಸಹಾಯವಾಗಿದೆ, ಹಾಗೆಯೇ ಅವರು ಆರ್ಥಿಕವಾಗಿ ಸ್ವಾವಲಂಬನೆಯಿಂದ ಬದುಕಲು ಪ್ರೇರಣೆಯಾಗಿದೆ ಎಂದು ಅನೇಕ ಫಲಾನುಭವಿಗಳು ಸಂಸ್ಥೆಯನ್ನು ಶ್ಲಾಘಿಸುತ್ತಾರೆ.





**ಮನುವಿಕಾಸ ಸಂಸ್ಥೆ ಉತ್ತರ ಕನ್ನಡ, ಹಾವೇರಿ, ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಪ್ರತಿ ತಾಲೂಕಿಗೂ ಸಂಬಂಧಿತ ಸಂಸ್ಥೆಯ ಕೆಲಸಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಈ ಕೆಳಗಿನಂತೆ ಸಿಬ್ಬಂದಿಗಳನ್ನು ನೇಮಿಸಿದೆ.**

| | | |
|---|---|---|
| ಶಿರಸಿ | ಮಂಜುನಾಥ ಹೆಗಡೆ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 94494 53774 |
| | ಅಶ್ವತ್ಥ ನಾಯ್ಕ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 99011 82957 |
| | ಗಣಪತಿ ಗಾಮದ್(ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 91132 59935 |
| | ಭವಾನಿ ನಾಯ್ಕ (ಸ್ವ ಸಹಾಯ ಸಂಘಗಳ ನಿರ್ವಹಣೆ) | 82960 53961 |
| | ಬಾಲಚಂದ್ರ ಗೌಡ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 94804 16732 |
| | ಶೇಖರ್ ನಾಯ್ಕ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 77952 28417 |
| | ನಾಗರಾಜ್ ಹಸ್ಲರ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 70227 63799 |
| ಸಿದ್ದಾಪುರ | ಪುನೀತ್ ನಾಯ್ಕ (ಸ್ವ ಸಹಾಯ ಸಂಘಗಳ ನಿರ್ವಹಣೆ) | 96862 24908 |
| | ರವಿ ಗೌಡ (ಸ್ವ ಸಹಾಯ ಸಂಘಗಳ ನಿರ್ವಹಣೆ) | 97407 48932 |
| ಸೊರಬ | ಮಣಿಕಂಠ ಚಲವಾದಿ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 88615 10625 |
| ಹಳಿಯಾಳ | ಮಂಜುನಾಥ್ ತೊರ್ಲೆಕರ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 95389 56554 |
| ದಾಂಡೇಲಿ | ನಿರಂಜನ್ ಕದಂ (ಸ್ವ ಸಹಾಯ ಸಂಘಗಳ ನಿರ್ವಹಣೆ) | 72596 89630 |
| ಮುಂಡಗೋಡ | ಬಸವರಾಜ್ ರಡ್ಡೇರ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 98458 84293 |
| ಹಾನಗಲ್ | ಗಣಪತಿ ಯಲಿವಾಳ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 99802 05013 |
| | ಜಗದೀಶ ಈರಣ್ಣನವರ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 73380 06242 |
| ಕಲಘಟಗಿ | ಸಂಜಯ್ ಚವಾಣ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 74113 83851 |
| ಕಾರವಾರ | ಸುಜಾತಾ ದುರ್ಗೆಕರ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 72045 77307 |
| ಅಂಕೋಲಾ | ಮಹೇಶ್ ನಾಯ್ಕ (ಸ್ವ ಸಹಾಯ ಸಂಘಗಳ ನಿರ್ವಹಣೆ) | 82770 02750 |
| ಕುಮಟಾ | ರಮೇಶ್ ನಾಯ್ಕ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 99026 24877 |

## ಮನುವಿಕಾಸ ಹಾಗೂ ಹೆಚ್.ಡಿ.ಎಫ್.ಸಿ ಬ್ಯಾಂಕ್ ಪರಿವರ್ತನ್ ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಮಾಹಿತಿ

| | | | |
|---|---|---|---|
| ಯಲ್ಲಾಪುರ | ಮೋಹನ್ ಸಿದ್ಧಿ | ಯೋಜನಾ ಅಧಿಕಾರಿ | 96860 89601 |
| | ಪವನ್ ಬೊಮ್ಮನಳ್ಳಿ | ವ್ಯಾಪಾರ ಅಭಿವೃದ್ಧಿ ಅಧಿಕಾರಿ | 72043 05775 |
| | ಚಂದನಾ ನಾಯ್ಕ | ವಲಯ ಸಂಯೋಜಕರು | 80737 16524 |
| | ವಿಲ್ಸನ್ ಸಿದ್ಧಿ | ಕ್ಷೇತ್ರ ಸಂಯೋಜಕರು | 88927 71312 |
| | ರಾಮಚಂದ್ರ ಸಿದ್ಧಿ | ಕ್ಷೇತ್ರ ಸಂಯೋಜಕರು | 82775 30941 |
| ಕುಂದಾಪುರ | ಮಿಥುನ್ ನಾಯ್ಕ | ವಲಯ ಸಂಯೋಜಕರು | 95352 71298 |
| | ನವೀನ್ ನಾಯ್ಕ | ಕ್ಷೇತ್ರ ಸಂಯೋಜಕರು | 94831 33650 |



















ಹೆಚ್ಚಿನ ಮಾಹಿತಿಗಾಗಿ ಕೆಳಗಿನ ಕ್ಯೂಆರ್‌ಕೋಡ್‌ಅನ್ನು ಸ್ಕ್ಯಾನ್ ಮಾಡಿ

ನಿಮ್ಮ ದೂರು ಮತ್ತು ಸಲಹೆಗಳಿಗೆ ಮನುವಿಕಾಸದ ಪ್ರಧಾನ ಕಛೇರಿಯನ್ನು ಸಂಪರ್ಕಿಸಿರಿ


MANUVIKASA

**ಮನುವಿಕಾಸ**

'ಶ್ರೀಮಾತಾ' ಬಿಲ್ಡಿಂಗ್, ವಿಜಯನಗರ, ತಾ: ಶಿರಸಿ

ಉತ್ತರಕನ್ನಡ–581401, ಕರ್ನಾಟಕ ದೂ: 98459 82552

email : manuvikasa@gmail.com I www.manuvikasa.org



Multi Offset, SIRSI 9449453234